ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper
70,000
HAMPI TIMES E-PAPER READERS
94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201

ಸಂಪುಟ:01	ಸಂಚಿಕೆ:341	ನೋಂದಣಿ ನಂ.:KARKAN27911	ವಿಜಯನಗರ	15.06.2024	ಶನಿವಾರ	ಪುಟ:04	ಬೆಲೆ:2
Volume:01	Issue:341	Reg.No:KARKAN27911	VIJAYANAGARA	15.06.2024	Saturday	Page:04	Rs:2

ಮೈಕ್ರೋ ನ್ಯೂಸ್

ಜೂನ್ 16 ಕ್ಕೆ ಶಿವಾನುಭವ ಸಂಪದ

ಹಂಪಿ ಟೈಮ್ಸ್ ಹೊಸಪೇಟೆ

ನಗರದ ಶ್ರೀ ಕೊಟ್ಟೂರು ಸಂಸ್ಥಾನ ಮಠದಲ್ಲಿ ಜೂ.16 ರಂದು ಸಂಜೆ 7ಕ್ಕೆ ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾ ಸ್ವಾಮಿಗಳ ಸಾನ್ನಿಧ್ಯದಲ್ಲಿ 1162ನೇ ಶಿವಾನುಭವ ಸಂಪದ ಜರುಗಲಿದೆ. ಲೇಖಕ ಎಂ.ಎಂ.ಶಿವಪ್ರಕಾಶ ಅವರು ಹಂಪೆಯ ನೂರೊಂದು ವಿರಕ್ತರು ಕುರಿತು ಉಪನ್ಯಾಸ ನೀಡಲಿದ್ದಾರೆ. ಬಸವ ಜಯಂತಿಯಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಮತ್ತು ಇತ್ತೀಚೆಗೆ ನಿವೃತ್ತಗೊಂಡವರಿಗೆ ಗೌರವ ಸನ್ಮಾನ ನಡೆಯಲಿದೆ ಎಂದು ಶ್ರೀ ಜಗದ್ಗುರು ಕೊಟ್ಟೂರುಸಂಸ್ಥಾನ ಮಠ ತಿಳಿಸಿದೆ.

ಜೂನ್ 21 ಕ್ಕೆ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ - ಸಚಿವ ಜಮೀರ್

ಹಂಪಿ ಟೈಮ್ಸ್ ಹೊಸಪೇಟೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಜೂನ್ 21 ರಂದು ಕೆಡಿಪಿ ಸಭೆ ನಡೆಯಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ. ಕಳೆದ ಬಾರಿ ಕೆಡಿಪಿ ಸಭೆಯಲ್ಲಿ ಮುಂದಿನ ಬಾರಿ ಮುಖ್ಯಮಂತ್ರಿ ಯವರು ಕೆಡಿಪಿ ಸಭೆ ನಡೆಸಲಿದ್ದಾರೆ ಎಂದು ಹೇಳಿದ್ದೆ. ಅದರಂತೆ ಮುಖ್ಯಮಂತ್ರಿ ಯವರಿಗೆ ಮನವಿ ಮಾಡಿ ಜೂನ್ 21 ರಂದು ಕೆಡಿಪಿ ಸಭೆ ನಿಗದಿ ಪಡಿಸಲಾಗಿದೆ ಎಂದು ಹೇಳಿದ್ದಾರೆ. ಕೆಡಿಪಿ ಸಭೆ ಹಿನ್ನೆಲೆ ಯಲ್ಲಿ ಜಿಲ್ಲಾಧಿಕಾರಿ ದಿವಾಕರ್ ಅವರೊಂದಿಗೆ ಮಾತನಾಡಿ ಕೆಡಿಪಿ ಸಭೆಗೆ ಎಲ್ಲ ಸಿದ್ಧತೆ ಮಾಡಿಕೊಳ್ಳುವತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ. ನೂತನ ಜಿಲ್ಲೆ ವಿಜಯ ನಗರ ದ ತಾಲೂಕು ಗಳಲ್ಲಿ ಒಂದಷ್ಟು ಸಮಸ್ಯೆ ಗಳಿದ್ದು ಮುಖ್ಯಮಂತ್ರಿ ಯವರು ಕೆಡಿಪಿ ಸಭೆ ನಡೆಸುವುದರಿಂದ ಹಲವಾರು ಸಮಸ್ಯೆ ಗಳಿಗೆ ಪರಿಹಾರ ದೊರಕುವ ನಿರೀಕ್ಷೆ ಇದೆ ಎಂದು ಸಚಿವರು ಆಶಾ ಭಾವನೆ ವ್ಯಕ್ತಪಡಿಸಿದ್ದಾರೆ.

ಕನ್ನಡ ಟ್ಯೂಷನ್
KANNADA TUITION
Kannada Tuition Are Done Here
Kannada Language Tuition
for 10th , PUC
State, CBSE and ICSE
Syllabus are done here.
with Individual attention,
helping out students with
their assignments
Betterment of Their
Academic Performance
*****
For More Details
SUMALATHA B.M
94491 90966
N.C.Colony , HOSAPETE
VIJAYANAGARA

ರಕ್ತ ಕೊಟ್ಟಷ್ಟು ಮತ್ತೆ ವೃದ್ಧಿ ರಕ್ತದಾನಿಗಳ್ಲಿ ಹೊಸ ಚೇತರಿಕೆ

ವಿಶ್ವ ರಕ್ತದಾನಿಗಳ ದಿನ: ರಕ್ತದಾನದ ಸಂದೇಶಕ್ಕಾಗಿ ಆರೋಗ್ಯ ಇಲಾಖೆಯಿಂದ ವಿಶೇಷ ಜಾಥಾ

ಜಿಪಂ ಸಿಇಒ ಬಿ.ಸದಾಶಿವ ಪ್ರಭು ಸಲಹೆ । ಮತ್ತೊಬ್ಬರ ಜೀವ ಉಳಿಸಿದೆ ಎಂಬ ಹೆಮ್ಮೆ ನಮ್ಮದು

■ ಹಂಪಿ ಟೈಮ್ಸ್ ಹೊಸಪೇಟೆ

ಇನ್ನೊಬ್ಬರ ಪ್ರಾಣ ಉಳಿಸಲು ನೆರವಾಗುವ ರಕ್ತದಾನದ ಬಗ್ಗೆ ಪ್ರತಿಯೊಬ್ಬರು ಅರಿಯಬೇಕು. ರಕ್ತದಾನ ಮಾಡಿದಲ್ಲಿ ಆರೋಗ್ಯ ಕೆಡುತ್ತದೆ ಎನ್ನುವ ತಪ್ಪು ಕಲ್ಪನೆಯಿಂದ ಹೊರಬರಬೇಕು ಎಂದು ಜಿಪಂ ಸಿಇಒ ಬಿ.ಸದಾಶಿವ ಪ್ರಭು ಹೇಳಿದರು.

ವಿಶ್ವ ರಕ್ತದಾನಿಗಳ ದಿನಾಚರಣೆಯ ನಿಮಿತ್ತ ರಕ್ತದಾನದ ಬಗ್ಗೆ ಸಾರ್ವಜನಿಕರಲ್ಲಿ ವಿಶೇಷ ಸಂದೇಶ ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡಿದ್ದ ವಿಶೇಷ ಜಾಥಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು. ಆರೋಗ್ಯದಿಂದ ಇರುವ ಮತ್ತು ವೈದ್ಯರು ನೀಡುವ ಸಲಹೆಯಂತೆ ರಕ್ತದಾನ ಮಾಡಬಹುದಾಗಿದೆ. ಇದರಿಂದಾಗಿ ರಕ್ತದಾನ ಮಾಡಿದವರಲ್ಲಿ ಹೊಸ ಚೇತರಿಕೆ ಬರುತ್ತದೆ. ಇನ್ನೊಬ್ಬರ ಪ್ರಾಣ ಕಾಪಾಡಿದೆ ಎನ್ನುವ ಹೆಮ್ಮೆ ಬರುತ್ತದೆ. ರಕ್ತದಾನ ಸಮಾಜೋಪಯೋಗಿ ಕಾರ್ಯವಾಗಿದೆ ಎಂದು ಸಲಹೆ ಮಾಡಿದರು.

ಡಿಎಚ್‌ಓ ಡಾ.ಶಂಕರ ನಾಯ್ಕ ಮಾತನಾಡಿ, ಜನರಲ್ಲಿ ರಕ್ತದಾನದ ಕುರಿತು ಜಾಗೃತಿ ಮೂಡಿಸುವುದು, ರಕ್ತದಾನಿಗಳಿಗೆ ಕೃತಜ್ಞತೆ ಸಲ್ಲಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳಾದ ಡಾ.ಜಂಬಯ್ಯ, ಡಾ.ದೊಡ್ಡಮನಿ, ಡಾ.ಕಮಲಮ್ಮ ಸೇರಿದಂತೆ ಇನ್ನೀತರ ವೈದ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರು ಮತ್ತು ಇನ್ನೀತರರು ಇದ್ದರು. ನಗರದ ಅಂಬೇಡ್ಕರ್ ವೃತ್ತದಲ್ಲಿ ಜಾಥಾಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ. ಸದಾಶಿವ ಪ್ರಭು ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಡಾ.ಅಂಬೇಡ್ಕರ್ ವೃತ್ತದಿಂದ ಹೊರಟ ಜಾಥಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯವರೆಗೆ ಸಾಗಿತು. ಬಳಿಕ ತಾಲೂಕು ಆರೋಗ್ಯಧಿಕಾರಿಗಳ ಕಚೇರಿಯಲ್ಲಿ ವೇದಿಕೆ ಕಾರ್ಯಕ್ರಮ ನಡೆಯಿತು.

ಹುಡಾ ಅಧ್ಯಕ್ಷರಾಗಿ ಎಚ್. ಎನ್.ಎಂ.ಇಮಾಮ್ ನಿಯಾಜಿ ಅಧಿಕಾರ ಸ್ವೀಕಾರ

ಅಭಿವೃದ್ಧಿಗೆ ಶ್ರಮಿಸುವೆ ಎಂದ ನಿಯಾಜಿ

■ ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರನ್ನಾಗಿ ಎಚ್. ಎನ್.ಮೊಹಮ್ಮದ್ ಇಮಾಮ್ ನಿಯಾಜಿ ಅವರನ್ನು ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಲತಾ ಅವರು ಶುಕ್ರವಾರ ನೇಮಕಾತಿ ಅಧಿಸೂಚನೆ ಹೊರಡಿಸಿ ಬೆನ್ನಲ್ಲೆ, ಶುಕ್ರವಾರ ಮಧ್ಯಾಹ್ನ ಹುಡಾ ಕಚೇರಿಯಲ್ಲಿ ಹುಡಾ ಆಯುಕ್ತ ಈರಣ್ಣ ಬಿರಾದಾರರಿಂದ ಅಧಿಕಾರವಹಿಸಿಕೊಂಡರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಸಪೇಟೆ ನಗರದ ಅಭಿವೃದ್ಧಿಗೆ ಶ್ರಮಿಸುವೆ. ಈವರೆಗೂ ಕೆಲ ಬಡಾವಣೆಗಳಲ್ಲಿ ಫಾರಂ ತ್ರಿ ನೀಡದಿರುವುದು ಮತ್ತು ಮೂಲಭೂತ ಸೌಲಭ್ಯಗಳ ಸಮಸ್ಯೆ ಜನರು ಎದುರಿಸುತ್ತಿರುವುದು ಗಮನಕ್ಕಿದೆ. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಸಲಹೆ ಮಾರ್ಗದರ್ಶನ ಪಡೆದು, ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಪರಿಹಾರ ಕಂಡುಕೊಳ್ಳಲಾಗುವುದು. ಎಲ್ಲರ ಸಹಕಾರದೊಂದಿಗೆ ಹೊಸಪೇಟೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವೆ ಎಂದರು.

ನೂತನ ಹುಡಾ ಅಧ್ಯಕ್ಷರಿಗೆ ಸನ್ಮಾನ

ವಿಜಯನಗರ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಿಂದ ನೂತನ ಹುಡಾ ಅಧ್ಯಕ್ಷ ಎಚ್.ಎನ್.ಎಂ. ಇಮಾಮ್ ನಿಯಾಜಿ ಅವರನ್ನು ಸನ್ಮಾನಿಸಲಾಯಿತು. ಚೇಂಬರ್ ಅಧ್ಯಕ್ಷ ಅಶ್ವಿನ್ ಕೋತಂಬ್ರಿ ಮತ್ತು ಕಾರ್ಯದರ್ಶಿ ಕಾಕುಬಾಳ್ ರಾಜೇಂದ್ರ ಮತ್ತು ಇತರ ಚೇಂಬರ್ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಉದ್ಯಮಿಗಳಾದ ಕೆ.ರವಿಶಂಕರ, ಎಚ್.ವಿ.ಶರಣಸ್ವಾಮಿ, ತಿರುಪತಿ ನಾಯ್ಡು, ಶ್ರೀಪಾದ ಇತರರು ಇದ್ದರು.

ಜೂ.19 ವಾರಸುದಾರರಿಲ್ಲದ ವಾಹನಗಳ ಬಹಿರಂಗ ಹರಾಜು

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯ ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡ ವಾರಸುದಾರರಿಲ್ಲದ ವಾಹನಗಳನ್ನು ಜಿಲ್ಲಾ ನ್ಯಾಯಾಲಯದಿಂದ ಅನುಮತಿ ಪಡೆದು ಜೂ.19 ರಂದು ಬಳ್ಳಾರಿ ಸಂಚಾರಿ ಪೊಲೀಸ್ ಠಾಣೆಯ ಆವರಣದಲ್ಲಿ ಬಹಿರಂಗ ಹರಾಜು ಪ್ರಕ್ರಿಯೆ ಏರ್ಪಡಿಸಲಾಗಿದೆ. ಅಂದು ಸಾರ್ವಜನಿಕರು ಮತ್ತು ಲೈಸೆನ್ಸ್ ಹೊಂದಿದ ಸ್ಕ್ರ್ಯಾಪ್ (ಗುಜರಿ) ಅಂಗಡಿ ಮಾಲೀಕರು ಭಾಗವಹಿಸಬಹುದು ಎಂದು ಸಂಚಾರಿ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೌರಕಾರ್ಮಿಕರು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ

ಪೌರಕಾರ್ಮಿಕರ ಮಗ ನಾನು ಎಂದು ಸಫಾಯಿ ಕರ್ಮಚಾರಿ ರಾಷ್ಟ್ರೀಯ ಆಯೋಗದ ಅಧ್ಯಕ್ಷ ಎಂ.ವೆಂಕಟೇಶನ್ । ಪ್ರಗತಿ ಪರಿಶೀಲನಾ ಸಭೆ । ಪೌರ ಕಾರ್ಮಿಕರ ಅಹವಾಲು ಆಲಿಕೆ

■ ಹಂಪಿ ಟೈಮ್ಸ್ ಹೊಸಪೇಟೆ

ಸಫಾಯಿ ಕರ್ಮಚಾರಿ ರಾಷ್ಟ್ರೀಯ ಆಯೋಗದ ಅಧ್ಯಕ್ಷರಾದ ಎಂ.ವೆಂಕಟೇಶನ್ ಅವರು ಜೂನ್ 14ರಂದು ವಿಜಯನಗರ ಜಿಲ್ಲೆಗೆ ಭೇಟಿ ನೀಡಿ ಜಿಲ್ಲೆಯ ವಿವಿಧ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಫಾಯಿ ಕರ್ಮಚಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲನಲ್ಲಿ ನಡೆದ ಸಭೆಯಲ್ಲಿ ಹೊಸಪೇಟೆ, ಕಮಲಾಪುರ, ಹಡಗಲಿ, ಹಗರಿಬೊಮ್ಮನಹಳ್ಳಿ ಸೇರಿದಂತೆ ಬೇರೆ ಬೇರೆ ಭಾಗಗಳಿಂದ ಬಂದಿದ್ದ ಪೌರ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು. ಅಧ್ಯಕ್ಷರು ಮೊದಲಿಗೆ ಪೌರ ಕಾರ್ಮಿಕರ, ಬಳಿಕ ಪೌರ ಕಾರ್ಮಿಕ ಯುನಿಯನ್ ಪದಾಧಿಕಾರಿಗಳ ಮತ್ತು ಹೊರಗುತ್ತಿಗೆ ಏಜೆನ್ಸಿದಾರರೊಂದಿಗೆ ನಾನಾ ವಿಷಯಗಳನ್ನು ಚರ್ಚಿಸಿದರು. ವಿಜಯನಗರ ಜಿಲ್ಲೆಯ ವಿವಿಧ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯ ಅಧಿಕಾರಿಗಳು, ಮುಖ್ಯಾಧಿಕಾರಿಗಳ ಸಮ್ಮುಖದಲ್ಲಿ ಪೌರ ಕಾರ್ಮಿಕರ ಅಹವಾಲು ಆಲಿಸಿದ್ದು ವಿಶೇಷವಾಗಿತ್ತು.

'ನಿಮ್ಮ ಪಿಎಫ್ ನಂಬರ್, ಇಎಸ್‌ಐ ನಂಬರ್ ಗೊತ್ತಿದೆಯಾ? ಮೆಡಿಕಲ್ ಇನ್ಶೂರನ್ಸ್ ಇದೆಯಾ? ಎಂದು ಅಧ್ಯಕ್ಷರು ಪೌರ ಕಾರ್ಮಿಕರಿಗೆ ಪ್ರಶ್ನಿಸಿ ಮಾಹಿತಿ ಪಡೆದುಕೊಂಡರು. ಪೌರ ಕಾರ್ಮಿಕರಿಗೆ ಕೊನೆಯ ಬಾರಿ ಆರೋಗ್ಯ ಶಿಬಿರ ಯಾವಾಗ ನಡಿಸಿದ್ದೀರಿ? ಎಂದು ನಗರಸಭೆ ಅಧಿಕಾರಿಗಳಿಗೆ ಕೇಳಿದರು. ವೇತನ ಪಾವತಿ ಸರಿಯಾದ ಸಮಯಕ್ಕೆ ಆಗುತ್ತಿದೆಯೇ? ನೀವು ಪ್ರತಿದಿನ ಕೆಲಸ ಮಾಡುವ ಅವಧಿ ಎಷ್ಟು? ಎಂದು ಕೇಳಿದ ಅಧ್ಯಕ್ಷರು, ಪೌರ ಕಾರ್ಮಿಕ ನೌಕರೊಬ್ಬರ ಮೆಸೇಜ್‌ಗೆ ಬಂದಿರುವ ಸಂದೇಶವನ್ನು ವೀಕ್ಷಿಸಿ ವೇತನವು ಬ್ಯಾಂಕಿನ ಖಾತೆಗೆ ಪ್ರತಿ ಮಾಹೆ ಸರಿಯಾದ ಸಮಯಕ್ಕೆ ಜಮಾ ಆಗುತ್ತಿರುವುದರ ಬಗ್ಗೆ ಖಚಿತಪಡಿಸಿಕೊಂಡರು. ಟಿಶರ್ಟ, ಪ್ಯಾಂಟ್, ರೇನ್‌ಕೋಟ್ ನೀಡುತ್ತಿರುವುದರ ಬಗ್ಗೆ ಸಹ ಪೌರ ಕಾರ್ಮಿಕರಿಗೆ ಕೇಳಿ ಖಚಿತಪಡಿಸಿಕೊಂಡರು. ಕೈತೊಳೆಯಲು ಸೋಪು ಕೊಡುತ್ತಾರಾ ಎಂದು ಕೇಳಿ ಸೌಲಭ್ಯಗಳ ಬಗ್ಗೆ ಪರಿಶೀಲಿಸಿದರು. ಹೊರಗುತ್ತಿಗೆ ಆಧಾರಡಿ ಕೆಲಸ ಮಾಡುವ ಪೌರ ಕಾರ್ಮಿಕ ನೌಕರರಿಗೆ ಪ್ರತಿ ಮಾಹೆ 14,800 ಮತ್ತು ಪೌರ ಕಾರ್ಮಿಕ ವಾಹನ ಚಾಲಕರಿಗೆ ಪ್ರತಿ ಮಾಹೆ 12,800 ರೂ ಸಿಗುತ್ತಿದೆ ಅಧಿಕಾರಿಗಳು ಅಧ್ಯಕ್ಷರಿಗೆ ಮಾಹಿತಿ ನೀಡಿದರು.

ಆರೋಗ್ಯ ಶಿಬಿರ ನಿಯಮಿತವಾಗಿ ನಡೆಸಿ: ಈ ಹಿಂದೆ ಆಯೋಗದಿಂದ ಸಭೆ ನಡೆದ ಬಗ್ಗೆ ಅಧ್ಯಕ್ಷರು ಕೇಳಿದರು. ಸಫಾಯಿ ಕರ್ಮಚಾರಿ ರಾಷ್ಟ್ರೀಯ ಆಯೋಗವು ಸಂವಿಧಾನತ್ಮಕವಾಗಿ ರಚನೆಯಾಗಿದೆ. ಪೌರ ಕಾರ್ಮಿಕರ ರಕ್ಷಣೆಗೆ ಆಯೋಗವು ಬದ್ಧವಾಗಿದೆ ಎಂದು ತಿಳಿಸಿದ ಅಧ್ಯಕ್ಷರು, ಉತ್ತಮವಾದ ಆರೋಗ್ಯ ಪ್ರತಿಯೊಬ್ಬರ ಹಕ್ಕಾಗಿದೆ. ಪ್ರತಿಯೊಬ್ಬ ಪೌರ ಕಾರ್ಮಿಕರಿಗೆ ಉತ್ತಮವಾದ ಆರೋಗ್ಯ ಸಿಗುವ ನಿಟ್ಟಿನಲ್ಲಿ ಎಲ್ಲಾ ಪುರಸಭೆ, ನಗರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ವಾರದೊಳಗೆ ಆರೋಗ್ಯ ಶಿಬಿರಗಳು ನಡೆಯಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಖಾಯಂ ನೌಕರರ ಅಹವಾಲು ಆಲಿಕೆ: ಸಭೆಯಲ್ಲಿ ಅಧ್ಯಕ್ಷರು ಖಾಯಂ ಪೌರ ಕಾರ್ಮಿಕ ನೌಕರರೊಂದಿಗೆ ಸಹ ಮಾತನಾಡಿದರು. ಹೆಣ್ಣು ಮಕ್ಕಳ ಸಮಸ್ಯೆಯನ್ನೇ ಆಲಿಸಲೆಂದೇ ಒಂದು ಸಮಿತಿಯಿದೆ. ಆ ಸಮಿತಿ ಇರುವ ಬಗ್ಗೆ ನಿಮಗೆ ಗೊತ್ತಿದೆಯಾ? >>3

ನ್ಯಾನೋ ಕಥೆ

ಹಣೆಬರಹ

ಓದುವುದರಲ್ಲಿ ಚುರುಕಾಗಿದ್ದ ಅವಳು ತರಗತಿಗೆ ಮೊದಲು ಬರುತ್ತಿದ್ದಳು.ಪಿಯುಸಿ ಫಲಿತಾಂಶಕ್ಕಾಗಿ ಕಾಯುತ್ತಾ ಇದ್ದಳು.ಆಕೆ ತನ್ನ ತಂದೆ ತಾಯಿಗೆ ಮುದ್ದಿನ ಒಬ್ಬಳೇ ಮಗಳು.ಚೆನ್ನಾಗಿ ಓದಿ ಐಎಎಸ್ ಅಧಿಕಾರಿ ಆಗಬೇಕೆಂಬ ಕನಸನ್ನು ಹೊತ್ತಿದ್ದಳು.ತಮ್ಮ ಊರಿನ ಜಾತ್ರೆಗೆ ಹೋಗಿ ವಾಪಾಸು ಬರುವಾಗ ಜೋರಾಗಿ ಮಳೆ ಬರುತ್ತಿತ್ತು.ಅವಳು ಪ್ರಯಾಣಿಸುತ್ತಿದ್ದ ಕಾರು ಅಪಘಾತಕ್ಕೀಡಾಯಿತು ತನ್ನ ಹೆತ್ತವರನ್ನು ಕಳೆದುಕೊಂಡಳು. ಅದೃಷ್ಟವಶಾತ್ ಇವಳು ಪ್ರಾಣಾಪಾಯದಿಂದ ಪಾರಾದಳು.ಸ್ವಲ್ಪ ದಿನದ ನಂತರ ಫಲಿತಾಂಶ ಘೋಷಣೆಯಾಯಿತು. ಅವಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಳು.ಅವಳ ಜವಾಬ್ದಾರಿಯನ್ನು ಹೊರಲು ಯಾರೂ ತಯಾರಿರಲಿಲ್ಲ ಹಾಗಾಗಿ ಹಿತೈಷಿಗಳೆಲ್ಲಾ ಸೇರಿ ವಿದ್ಯಾವಂತ ವರನಿಗೆ ಮದುವೆ ಮಾಡಲು ನಿಶ್ಚಯಿಸಿದರು ಹಣೆಬರಹಕ್ಕೆ ಹೊಣೆ ಯಾರು ಎಂದುಕೊಂಡು,ತನ್ನ ಹೆತ್ತವರು ಇದಿದ್ದರೆ ನನ್ನ ಕನಸೆಲ್ಲಾ ನನಸಾಗಿ ಹಣೆಬರಹವೇ ಬದಲಾಗಿರುತಿತ್ತು ಎಂದು ಕಣ್ಣ ನೀರನ್ನು ಒರೆಸಿಕೊಳ್ಳುತ್ತಾ ಮದುವೆಗೆ ಒಪ್ಪಿಗೆ ಸೂಚಿಸಿದಳು.

– ಚೇತನ ಭಾರ್ಗವ, ಬೆಂಗಳೂರು

ಜುಲೈ 13ರಂದು ರಾಷ್ಟ್ರೀಯ ಲೋಕ ಅದಾಲತ್

ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕು ಕಾನೂನು ಸೇವಾ ಸಮಿತಿ ಹೊಸಪೇಟೆ ವತಿಯಿಂದ ಜುಲೈ 13ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನ್ಯಾಯಾಲಯಗಳ ಆವರಣದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮ ನಡೆಯಲಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಇರುವವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ರಾಜಿ ಸಂಧಾನದ ಮೂಲಕ ತಮ್ಮ ಪ್ರಕರಣಗಳನ್ನು ಶೀಘ್ರವಾಗಿ ಬಗೆಹರಿಸಿ ಕೊಳ್ಳಬಹುದು ಎಂದು ಹೊಸಪೇಟೆ ಪ್ರದಾನ ಸಿವಿಲ್ ನ್ಯಾಯಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಬೆಳಕಿನ ಹಾದಿ: ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಇಂಗ್ಲಿಷ್ ಕಲಿಕೆಗೆ ರಹದಾರಿ
'ಒನ್ ಅವರ್ ಇಂಗ್ಲಿಷ್ ಗ್ರಾಮರ್'

ಮಕ್ಕಳ ಬೇಸಿಗೆ ರಜೆ ಮುಗಿದು ಮತ್ತೆ ಮರಳಿ ಗೂಡಿನತ್ತ ಎನ್ನುವಂತೆ ಶಾಲೆಯತ್ತ ಹೆಜ್ಜೆ ಇಡುತ್ತಲಿದ್ದಾರೆ. ಮಕ್ಕಳಿಗೆ ಶಾಲೆಯಲ್ಲಿ ಪಠ್ಯಪುಸ್ತಕದ ಜೊತೆಗೆ ಕಲಿಕೆಗೆ ಪೂರಕವಾದ ಪುಸ್ತಕಗಳ ಓದಿನ ರುಚಿ ಹತ್ತಿಸುವುದು ದೊಡ್ಡವರ ಜವಾಬ್ದಾರಿ ಮತ್ತು ಸವಾಲಿನ ಕೆಲಸವಾಗಿದೆ. ಮಕ್ಕಳ ಕೈಗೆ ದೊರಕುವ ಪುಸ್ತಕಗಳು ಅವರ ಬದುಕಿಗೆ ಮನೋರಂಜನೆ ಹಾಗೂ ಹೊಸ ವಿಷಯಗಳ ಜೊತೆಗೆ ಮತ್ತು ಸ್ಫೂರ್ತಿಯನ್ನು ನೀಡುವಂತಾದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಎರಡು ಮಹತ್ತರ ಪುಸ್ತಕಗಳನ್ನು ಪರಿಚಯಿಸುವ ಆಶಯದಲ್ಲಿ ಈ ಲೇಖನ.

ನಾಡಿನ ಯುವಜನತೆಯಲ್ಲಿ ಬಹುತೇಕರಿಗೆ ಬೇದ್ರೆ ಮಂಜುನಾಥ ಅವರ ಹೆಸರು ಚಿರಪರಿಚಿತ. ಮಕ್ಕಳು, ವಿದ್ಯಾರ್ಥಿಗಳು ಮತ್ತು ಯುವಜನತೆಗೆ ದಾರಿದೀಪವಾಗಬಲ್ಲ ಬರವಣಿಗೆಯಲ್ಲಿ ಅವರು ಎತ್ತಿದ ಕೈ. ಭಾಷಾ ಬೋಧನೆ, ಕ್ವಿಜ್, ಅಡ್ವೆಂಚರ್, ಕೆರೀರ್ ಗೈಡೆನ್ಸ್, ಸ್ಕಿಲ್ ಟ್ರೈನಿಂಗ್, ಇಂಗ್ಲಿಷ್, ವ್ಯಕ್ತಿತ್ವ ವಿಕಾಸ ಮತ್ತು ಸಾಮಾನ್ಯ ಜ್ಞಾನದ ಕುರಿತು ಮಂಜುನಾಥ ಅವರು ಬರೆದಿರುವ ಲೇಖನಗಳು ಲೆಕ್ಕವಿಲ್ಲದಷ್ಟು. ಜೊತೆಗೆ ಈ ಕುರಿತು ಅವರು 95ಕ್ಕೂ ಹೆಚ್ಚು ಕೃತಿಗಳನ್ನು ಬರೆದಿರುವುದೇ ಅವರ ದೈತ್ಯ ಬರವಣಿಗೆಗೆ ಸಾಕ್ಷಿ. ಅವುಗಳಲ್ಲಿ ಬಹುತೇಕ ಪುಸ್ತಕಗಳು ಹತ್ತಾರು ಬಾರಿ ಮರು ಮುದ್ರಣಗೊಂದು ಓದುಗರಿಗೆಲ್ಲಾ ಸದಾ ಮಾರ್ಗದರ್ಶನ ಮಾಡುತ್ತಿವ

ಅನುಭವದಲ್ಲಿ ಅಮೃತವಿದೆ ಎನ್ನುವಂತೆ, 1984–85ರಿಂದಲೂ ಬೇದ್ರೆ ಪ್ರತಿಷ್ಠಾನ–ಅನೌಪಚಾರಿಕ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಭಾಷಾ ಪ್ರಯೋಗಶಾಲೆಯ ವತಿಯಿಂದ ಇಂಗ್ಲಿಷ್ ಕಲಿಕೆಯ ವಿವಿಧ ಪ್ರಯೋಗಗಳ ಆಧಾರದ ಮೇಲೆ ಬೇದ್ರೆ ಮಂಜುನಾಥ ಅನೇಕ ಪುಸ್ತಕಗಳನ್ನು ರಚನೆಮಾಡಿದ್ದಾರೆ. ಶ್ರೀಯುತರು ಕನ್ನಡದ ಮೂಲಕ ಇಂಗ್ಲಿಷ್ ಕಲಿಸುವ ಕುರಿತ ರಚಿಸಿದ ಮಹತ್ತರ ಕೃತಿ **CONCISE APPLIED ENGLISH COURSE.** ಮಹತ್ತರ ಕೃತಿ ಇದರ ಮುಂದುವರೆದ ಭಾಗವೇ ನವಕರ್ನಾಟಕ ಪ್ರಕಾಶನದವರು ಪ್ರಕಟಿಸಿರುವ " ಒನ್ ಮಿನಿಟ್ ಇಂಗ್ಲಿಷ್" ಮತ್ತು "ಒನ್ ಅವರ್ ಇಂಗ್ಲಿಷ್ ಗ್ರಾಮರ್" ಕೃತಿಗಳು.

ಇಂದು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಜಗತ್ತಿನಲ್ಲಿ ಪತ್ರ ಲೇಖನ, ಪ್ರಬಂಧ, ನಿಬಂಧಗಳೆಲ್ಲ ದೀರ್ಘ ಅಭ್ಯಾಸಗಳೆಂದು ಪರಿಗಣಿತವಾಗಿ, ಎಸ್.ಎಂ.ಎಸ್., ಚಾಟಿಂಗ್, ಇ–ಮೇಲ್ ಭರಾಟೆ ಆರಂಭ ಆಗಿರುವುವಿದರಿಂದ ಮೊಬೈಲ್, ಇಂಟರ್‌ನೆಟ್, ಫೇಸ್‌ಬುಕ್ ಮತ್ತು ಬ್ಲಾಗ್‌ಗಳ ಮೂಲಕ ತೋಚಿದ್ದನ್ನು ಗೀಚಿ (ಟೈಪ್ ಮಾಡಿ) ಕಲಿಯುವ ಧಾವಂತದಲ್ಲಿ ಪ್ರಪಂಚ ಓಡುತ್ತಿದೆ. ಕಾಲಕ್ಕೆ ತಕ್ಕಂತೆ ನಾವೂ ಬದಲಾಗಲೇ ಬೇಕು. ಹಾಗಾಗಿ ಇಂದಿನ ಫಾಸ್ಟ್ ಯುಗದಲ್ಲಿ ಎಲ್ಲವೂ ಫಾಸ್ಟ್ ಆಗುತ್ತಿವೆ. ಅದಕ್ಕೆ ತಕ್ಕನಾಗಿ ನಾವು ಹೊಂದಿಕೊಳ್ಳಲೇಬೇಕು. ಸಮಯಕ್ಕೆ ಅತ್ಯಂತ ಹೆಚ್ಚಿನ ಬೆಲೆ ಬಂದಿರುವುದರಿಂದ ಅದಕ್ಕೆ ತಕ್ಕನಾಗಿ ನಮ್ಮ ಕಲಿಕೆಯನ್ನು ಅಣಿಗೊಳಿಸಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ.

ಬಹಳ ಮುಖ್ಯವಾಗಿ ಇಂದು ಪ್ರಪಂಚದ ವ್ಯವಹಾರ ಭಾಷೆಯಾಗಿರುವ ಇಂಗ್ಲಿಷ್‌ನಿಂದ ನಾವು ದೂರವಿರಲು ಸಾಧ್ಯವಿಲ್ಲ. ದಿನಕ್ಕೆ ತಕ್ಕಂತೆ ಹೊಸ ಹೊಸ ವಿಭಿನ್ನ ವಿಚಾರ, ತಂತ್ರಜ್ಞಾನ, ಆಧುನಿಕತೆ ಹಾಗೂ ಜಾಗತಿಕ ಸವಾಲುಗಳಿಗೆ ಇಂಗ್ಲಿಷ್ ಮೂಲಕ ತೆರೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಕಷ್ಟಪಡಬೇಕಾಗುತ್ತದೆ. ಆದರೆ ಇಂಗ್ಲಿಷ್ ನಮ್ಮ ಮಕ್ಕಳಾದಿಯಾಗಿ ಎಲ್ಲರಿಗೂ ಒಂದು ರೀತಿ ಕಬ್ಬಿಣದ ಕಡಲೆಯಾಗಿದೆ. ಅದನ್ನು ಕಲಿಯಲು ಆಗದೆ, ಬಿಡಲೂ ಆಗದೆ ಅಡಕತ್ತರಿಯಲ್ಲಿ ಸಿಲುಕಿಕೊಂಡವರೇ ನಮ್ಮಲ್ಲಿ ಹೆಚ್ಚು. ಕೊನೆಗೆ ಅದು ಅರ್ಥವಾಗದೇ ಕಂಠಪಾಠದ ಮೊರೆ ಹೊಕ್ಕವರು ನಮ್ಮಲ್ಲಿ ಕಡಿಮೆ ಇಲ್ಲ.



ಈ ಹಿನ್ನಲೆಯಲ್ಲಿ ಇಂಗ್ಲಿಷ್‌ನ್ನು ಬಾಯಿಪಾಠ ಮಾಡಬೇಕಾಗಿಲ್ಲ. ಈಗ ಏನಿದ್ದರೂ ಅಪ್ಲೈಡ್ ಗ್ರಾಮರ್ ಕಾಲ. ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟನ್ನು ಕಲಿತರೆ ಸಾಕು ಎನ್ನುವ ಹಂತವನ್ನು ತಲುಪಿದ್ದೇವೆ. ಈ ಅಂಶವನ್ನು ಮನಗಂಡ ಬೇದ್ರೆ ಮಂಜುನಾಥ 2008ರಲ್ಲಿಯೇ " ಒನ್ ಮಿನಿಟ್ ಇಂಗ್ಲಿಷ್" ಪುಸ್ತಕವನ್ನು ರಚಿಸಿದರು. ಈ ಕೃತಿ ಸಂಪೂರ್ಣವಾಗಿ ಕಾರ್ಟೂನ್‌ಮಯವಾಗಿದೆ. ಅವುಗಳ ಮೂಲಕ ಮಾತನಾಡುವ ಕಲೆಯನ್ನು ಕರಗತ ಮಾಡಿಕೊಳ್ಳುವ ಶೈಲಿಯನ್ನು ಪರಿಚಯಿಸಲಾಗಿದೆ. ಅದರಲ್ಲಿನ ಒಂದೊಂದು ಪುಟ ಒಂದೊಂದು ಕಲಿಕೆಯನ್ನು ಮೂಡಿಸುತ್ತದೆ. ಉದಾಹರಣೆಗೆ **Language skills, Sentences, Words, Parts of Speech, Tenses** ಮುಂತಾದವುಗಳಿಂದ ತುಂಬಿರುವ ಈ ಹೊತ್ತಿಗೆ ಅತ್ಯಂತ ಸರಳವಾಗಿ ಇಂಗ್ಲಿಷ್ ಕಲಿಕೆ ಮಡಿಸುತ್ತದೆ.

ಒಂದು ನಿಮಿಷಕ್ಕೆ ಒಂದು ಪುಟದಂತೆ 60 ನಿಮಿಷಗಳಲ್ಲಿ ಕಾರ್ಟೂನ್ ಕ್ಯಾರೆಕ್ಟರ್‌ಗಳು ಸಂಭಾಷಣೆ ನಡೆಸುವುದನ್ನು ಓದಿದರೆ ಗ್ರಾಮರ್ ಕಲಿಕೆಯಾಗುತ್ತದೆ. ಆ ಮೂಲಕ ಇಂಗ್ಲಿಷ್ ಮಾಧ್ಯಮದ ಮಕ್ಕಳು ಮತ್ತು ಶಿಕ್ಷಕರ ಮನಸ್ಸನ್ನು ಈ ಹೊತ್ತಿಗೆ ಗೆದ್ದಿತ್ತು. ಅದು ಕೆಲವೇ ವರ್ಷಗಳಲ್ಲಿ ಹತ್ತಾರು ಮರು ಮುದ್ರಣವಾಗಿದ್ದೇ ಅದರ ಜನಪ್ರಿಯತೆಗೆ ಸಾಕ್ಷಿ. ಈ ಪುಸ್ತಕದ ಯಶಸ್ಸು ಬೇದ್ರೆ ಮಂಜುನಾಥ ಅವರಿಗೆ ಮತ್ತಷ್ಟು ಹೊಸ ಪ್ರಯತ್ನಗಳಿಗೆ ಕೈ ಹಾಕಲು ಪ್ರೇರಣೆ ನೀಡಿತು. ಆಗ ಅವರಿಗೆ ಇಂಗ್ಲಿಷ್ ಭಾಷೆಯ ಮೂಲಕ ಇಂಗ್ಲಿಷ್ ಗ್ರಾಮರ್ ಕಲಿಸುವ ಸಾವಿರಾರು ಪುಸ್ತಕಗಳು ಪುಸ್ತಕ ಮಳಿಗೆಗಳಲ್ಲಿ ಲಭ್ಯವಿವೆ. ಆದರೆ ಕನ್ನಡದ ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಸರಳವಾಗಿ ಕನ್ನಡದ ಮೂಲಕ ಇಂಗ್ಲಿಷ್ ಕಲಿಸುವ ಪುಸ್ತಕಗಳು ದೊರಕುತ್ತಿಲ್ಲ ಎನ್ನುವುದನ್ನು ಮನಗಂಡು ಆ ನಿಟ್ಟಿನಲ್ಲಿ ಹೊಸತನಕ್ಕೆ ತಮ್ಮನ್ನು ತೊಡಗಿಸಿಕೊಂಡರು. ಅವರ ಈ ವಿನೂತನ ಫಲದ ಪ್ರಯತ್ನವೇ ಒಂದು ನಿಮಿಷಕ್ಕೆ ಒಂದು ಪುಟದಂತೆ 60ನಿಮಿಷಗಳಲ್ಲಿ ಇಂಗ್ಲಿಷ್ ಕಲಿಕೆಯ ಮೂಲ ಸೂತ್ರಗಳನ್ನು ಸುಲಭವಾಗಿ ಕಲಿಸುವ ಕೃತಿ "ಒನ್ ಅವರ್ ಇಂಗ್ಲಿಷ್ ಗ್ರಾಮರ್" ರಚನೆಯಾಯಿತು. ಒಂದೇ ಗಂಟೆಯಲ್ಲಿ ಇಂಗ್ಲಿಷ್ ವ್ಯಾಕರಣ ಕಲಿಯಲು ಸಾಧ್ಯವೇ? ಎಂದು ಹುಬ್ಬೇರಿಸುವವರೆಗೆ ಉತ್ತರವಾಗಿ ಈ ಕೃತಿ ಮೂಡಿಬಂದಿದೆ.

ಈ ಕೃತಿಯು ಇಂಗ್ಲೀಷ್ ವ್ಯಾಕರಣವನ್ನು ಸುಲಭ ರೂಪದಲ್ಲಿ ಕಲಿಯಲು ಸಹಾಯವಾಗುವಂತಹ ಅಂಶಗಳನ್ನು ಒಳಗೊಂಡಿದೆ. ನಿತ್ಯ ಬದುಕಿನಲ್ಲಿ ಬಳಸುವ ವಾಕ್ಯ ರಚನೆಗೆ ಉಪಯೋಗವಾಗುವ ಮಾಹಿತಿಗಳನ್ನೂ ಇದರಲ್ಲಿ ಕಾಣುತ್ತೇವೆ. ಪುಸ್ತಕದಲ್ಲಿ ಎರಡು ಭಾಗಗಳಿದ್ದು, ಮೊದಲ ಭಾಗದಲ್ಲಿ **LANGUAGE** ಮತ್ತು ಎರಡನೆ ಭಾಗದಲ್ಲಿ **GRAMMAR** ಗಳಿವೆ. ಕೃತಿಯ ಪ್ರತಿ ಪುಟದಲ್ಲಿಯೂ ಸರಳ ಇಂಗ್ಲಿಷ್ ಮಾಹಿತಿ ಜೊತೆ ಕನ್ನಡದಲ್ಲಿಯೂ ವಿವರಣೆ ನೀಡಲಾಗಿದೆ. ಭಾಷೆಗೆ ಸಂಬಂಧಿಸಿದಂತೆ **LANGUAGE,**



SKILLS OF LEARNING A LANGUAGE, BASIC ELEMENTS, LETTER, WORD, SIMPLE-COMPOUND-DERIVATIVE WORDS ಇದರಲ್ಲಿ ವಿಷಯಗಳ ಕಲಿಕೆ ಮಾಡಬಹುದು.

ಎರಡನೆಯ ಗ್ರಾಮರ್ ಸಂಬಂಧಿಸಿದಂತೆ ಅತ್ಯಂತ ಸರಳವಾದ ಸೂತ್ರಗಳ ಮೂಲಕ ಕೃತಿ ಹೆಚ್ಚು ಗಮನ ಸೆಳೆಯುತ್ತದೆ. ಇದರಲ್ಲಿ SENTENCE, KINDS OF SENTENCES, PARTS OF SPEECH, NOUN, PRONOUN, ADJECTIVE, VERB, ADVERB, PREPOSITION. CONJUNCTION, INTERJECTION, BASIC SENTENCE STRUCTURES, THE TENSE: PRESENT-PAST-FUTURE, QUESTION FORMS, ACTIVE VOICE TO PASSIVE VOICE, DIRECT SPEECH TO INDIRECT SPEECH ಕುರಿತಾದ ಅಂಶಗಳ ಕುರಿತಾಗಿ ಕೃತಿಯು ಆಂಗ್ಲ ಭಾಷೆ ಬರದವರಿಗೂ ಅದನ್ನು ಕಲಿಸುತ್ತದೆ ಎನ್ನುವುದೇ ಈ ಪುಸ್ತಕದ ಹೈಲೈಟ್.

ಇಂಗ್ಲಿಷ್ ಭಾಷೆ ಕಲಿಯುವುದಕ್ಕೆ ಕನ್ನಡದಲ್ಲಿರುವ ಈ ಪುಸ್ತಕ ಓದಬೇಕೆ? ಇಂಗ್ಲಿಷ್‌ನಲ್ಲಿ ವಿವರಣೆ ನೀಡಿರುವ ನೂರಾರು ಪುಸ್ತಕಗಳಿರುವಾಗ ಈ ಕನ್ನಡದ ವಿವರಣೆ ಓದಿದರೆ ಅರ್ಥವಾಗುತ್ತದೆಯೇ?. ಎಂದು ಹೇಳುವವರು ಒಮ್ಮೆ ಈ ಪುಸ್ತಕವನ್ನು ಕಣ್ಣಾಡಿಸಿದರೆ ಅವರ ಅನೇಕ ಪ್ರಶ್ನೆಗಳಿಗೆ ಇಲ್ಲಿ ಉತ್ತರ ದೊರೆಯುತ್ತದೆ. ಬಹಳ ಮುಖ್ಯವಾಗಿ ಕನ್ನಡದ ಮೂಲಕ ಇಂಗ್ಲಿಷ್ ಇನ್ನಷ್ಟು ಸುಲಭವಾಗಿ ಅರ್ಥವಾಗುತ್ತದೆ ಎನ್ನುವುದಕ್ಕೆ ಇಲ್ಲಿ ಉತ್ತರವಿದೆ. ಯಾಕೆಂದರೆ ಶಿಕ್ಷಣ ತಜ್ಞರ ಪ್ರಕಾರ ಮಾತೃಭಾಷೆಯನ್ನು ಬಳಸಿ ಬೇರೆ ಭಾಷೆಯನ್ನು ಕಲಿಯುವುದು ಅತ್ಯಂತ ಸುಲಭ ಎನ್ನುವ ಮಾತಿಗೆ ಈ ಕೃತಿ ಪುಷ್ಟಿಕೊಡುವಂತಿದೆ.

ಈ ಪುಸ್ತಕವನ್ನು ತೆರೆದು ನೋಡಿದರೆ ಮೊದಲು ನಮಗೆ ಈ ಪುಸ್ತಕವು ಕನ್ನಡದಿಂದ ಇಂಗ್ಲೀಷ್ ಕಲಿಯಲು ಒಂದು ಅತ್ಯುತ್ತಮ ಮಾರ್ಗದರ್ಶಿಯಾಗಿದೆ ಎಂಬುದು ಅರಿವಾಗುತ್ತದೆ. ಇದು ದ್ವಿಭಾಷಾ ಪುಸ್ತಕವಾಗಿದ್ದು ಕನ್ನಡ ಹಾಗೂ ಇಂಗ್ಲಿಷ್ ಎರಡೂ ಭಾಷೆಗಳ ವ್ಯಾಕರಣ ಕಲಿಯಲು ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳು ಹಾಗೂ ಆರಂಭಿಕ ಹಂತದಲ್ಲಿ ಇಂಗ್ಲಿಷ್ ಕಲಿಯಲು ಈ ಪುಸ್ತಕ ಪ್ರೇರಣೆ ನೀಡುತ್ತದೆ. ಎಲ್ಲ ವಯಸ್ಸಿನವರು ಕೂಡ ಈ ಪುಸ್ತಕದ ಸಹಾಯದಿಂದ ಸುಲಭವಾಗಿ ಇಂಗ್ಲಿಷ್ ಭಾಷೆಯನ್ನು ಕಲಿತು ಮಾತನಾಡಬಹುದು. ಆ ಮೂಲಕ ಇಂಗ್ಲಿಷ್ ಭಯ ನಿವಾರಿಸುತ್ತಾ ಮಕ್ಕಳಲ್ಲಿ ಮತ್ತು ಕಲಿಯುವವರಲ್ಲಿ ಅದರ ಕುರಿತು ಪ್ರೀತಿಯನ್ನು ಬೆಳೆಸುವಲ್ಲಿ ಈ **'ONE HOUR ENGLISH GRAMMAR'** ಕೃತಿ ಒಂದು ಹೆಜ್ಜೆ ಮುಂದೆ ಇಟ್ಟಿದೆ.

ಆರೋಗ್ಯವಂತರು ರಕ್ತದಾನ ಮಾಡಿ: ಡಿಎಚ್‌ಓ

ಅತಿ ಹೆಚ್ಚು ಬಾರಿ ರಕ್ತದಾನಿಗಳಾದ ನಂದಕುಮಾರ್, ಎ.ಕೆ.ದೀಪಕ್‌ಕುಮಾರ್, ನವೀನ್ ನಾಯ್ಡು, ಮಂಜುನಾಥ್, ಸದ್ದಾಂ ಹುಸೇನ್, ಮೈಲಪ್ಪ, ಎಸ್.ವಿಜಯಕುಮಾರಗೆ ವಿಶೇ

ಕವಿ ಮನಸು

ಶ್ರೀ ಭ್ರಮರಾಂಬಿಕೆ

ನೋಡಿದೆ ಮಾತೆಯ ದೇವಾಲಯ
ನೆಮ್ಮದಿ ನೀಡುವ ಕ್ಷೇಮಾಲಯ
ನಂದಿನೀ ನದಿ ನಡುವೆ ಈ ತಾಯಿ ವಾಸ
ಭಕ್ತರನು ಪೊರೆಯುತಿಹ ಶ್ರೀ ದುರ್ಗೆ ಮಾತಾ

ಮಲ್ಲಿಗೆಯ ಹೂವಿನಲಿ ಅಲಂಕೃತಳು ತಾಯಿ
ಭಕ್ತರನು ಪೊರೆಯುತಿಹ ಆನಂದದಾಯಿ
ದೊರೆತಿರುವ ಸೌಭಾಗ್ಯ ಸನ್ನಿಧಿಗೆ ಬಂದು
ನನ್ನರೆಡು ಕಣ್ಣುಗಳು ಧನ್ಯವಿದ ಕಂಡು

ಅರುಣದಾನವನಂದು ಲೋಕಪೀಡಿತನಾಗಿ
ಮೆರೆಯುತಿರೆ ನೀ ಬಂದೆ ಭಕ್ತರಕ್ಷಣೆಗಾಗಿ
ದುಂಬಿಯಾ ರೂಪದಲಿ ನೀ ಬಂದೆ ತಾಯೆ
ದಾನವನ ಮುಗಿಸಿರುವ ಭ್ರಮರಾಂಬಿಕೆ

ಭಕ್ತಿಯಲಿ ನಾ ನೆನೆವೆ ಈ ದಿವ್ಯ ಚರಣ
ನೊಂದಿರುವ ಕಂದನಲಿ ಇರಲಮ್ಮ ಕರುಣ
ಹಂಗಿರದ ಬದುಕಿತ್ತು ಪೊರೆಯಮ್ಮ ನನಗೆ
ಶ್ರೀ ಪಾದದಡಿಯಲ್ಲಿ ನೆಲೆಗೊಳಿಸು ಕೊನೆಗೆ ॥

–ಪೆರ್ಮುಖ ಸುಬ್ರಹ್ಮಣ್ಯ ಭಟ್

ದೇವರ ಮಕ್ಕಳು

ಇದ್ದಲ್ಲಿ ದಾರಿ ತಪ್ಪಿದ
ವಲಸಿಗರ ಮಕ್ಕಳು
ಅಪ್ಪಅಮ್ಮರಿಂದ ದೂರವಾಗಿ
ಕಂಗಲಾದ ಕಂದಮ್ಮಗಳು

ಕಣ್ಣುಗಳ ಅರಸುತ್ತಿವೆ
ತಂದೆ ತಾಯಿಗಳಿಗಾಗಿ
ಎರಡು ಕೈಗಳು ಚಾಚುತ್ತೀವೆ
ತನ್ನವರ ಆಸರೆಗಾಗಿ

ನಿರೀಕ್ಷೆಯ ಸಾಲಲ್ಲಿ
ನಿಲ್ಲಲು ವಯಸ್ಸಿಲ್ಲ
ಬಯಕೆಯ ಬೇಲಿಯಿಲ್ಲ
ಕುಂತಲ್ಲೇ ಇದ್ದಾರಲ್ಲ

ಮುಗ್ಧತೆ ಬಿಗಿದಪ್ಪಿದೆ
ಪ್ರೀತಿಗೆ ಕೊನೆಯಿಲ್ಲದೇ
ಹಾಗೆಯೇ ಉಳಿಯುವರು
ದೇವರ ಮಕ್ಕಳಾಗಿ

– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ, ಹಗರಿಗಜಾಪುರ

ಶುದ್ಧಿ

ಮಾಯೆಯ ಮಂಜು ಮುಸುಕಿದ ಬುದ್ಧಿ
ಮನದ ಮನೆಯಲ್ಲಿ ರಾಗದ್ವೇಷಗಳದ್ದೇ
ಸುದ್ಧಿ
ಚಿತ್ತ ಚಂಚಲದ ಮನಕೆ ಗುದ್ಧಿ
ಸಾಧನೆಯಲ್ಲಿ ಆಗಲಿ ನಮ್ಮ ಆತ್ಮ ಶುದ್ಧಿ
ಕವಿದಿದೆ ಎಲ್ಲೆಡೆ ಅಜ್ಞಾನದ ಮಸುಕು
ಕರ್ಮದ ಮರುಭೂಮಿ ಮುಗಿಯದ
ಉಸುಕು
ಭಗವಂತನ ನಾಮದಿ ಕಳೆಯಲಿ ಬದುಕು
ಬೆಳಗಲಿ ನಮ್ಮಲಿ ಆತ್ಮ ಜ್ಯೋತಿಯ ಬೆಳಕು

–ಚೇತನ ಭಾರ್ಗವ, ಬೆಂಗಳೂರು

ಸಮ್ಮೋಹಕ ಬಂಗಾರ

ಬಂಗಾರದೊಡವೆ ಬೇಕೇ ನೀರೆ, ನಿನಗೆ ಬಂಗಾರದೊಡವೆ ಬೇಕೆ"?ಎನ್ನುವ ಡಾ.ರಾಜ್ ಕುಮಾರ್ ಅವರ ಮನೋಜ್ಞ ಅಭಿನಯದ, "ಕಣ್ತೆರೆದು ನೋಡು" ಸಿನಿಮಾದ ಸಾಲು, ಮನುಜನ ಬಂಗಾರದ ಆಸೆ, ಮೋಹವನ್ನು ಹೇಳುತ್ತದೆ.

ಸಹಜವಾಗಿ ಬಂಗಾರವೆಂದರೆ ಕಣ್ಣರಳುತ್ತದೆ. ಇನ್ನೂ ಬಂಗಾರ ಕೊಳ್ಳೋಣ!! ಎಂಬ ಪದವೇ, ಕಣ್ಣರಳಿಸಿ ರೋಮಾಂಚನವಾಗಿಸುತ್ತದೆ. ಹಳದಿಯ ವ್ಯಾಮೋಹವೇ ಅಂಥದ್ದು. ಪ್ರತಿ ಮಹಿಳೆಗೂ ಒಂದಾದರೂ ಬಂಗಾರದೊಡವೆ ಇರಬೇಕೆಂಬುದು ಅವಳ ಸಹಜ ಆಸೆ. ಹಳದಿ ಲೋಹದ ಮೋಹಕ್ಕೆ ಬಡವರು–ಬಲ್ಲಿದರು ಎಂಬ ಭೇದವಂತೂ ಇಲ್ಲ.

ಶಂಕರಾಚಾರ್ಯರು ಬಂಗಾರದ ಮಳೆ ಸುರಿಸುವ 'ಕನಕಧಾರ ಸ್ತೋತ್ರ' ವನ್ನು, ನೆಲ್ಲಿ ಮರದ ಕೆಳಗೆ ಹೇಳುವಾಗ ಚಿನ್ನದ ಸುರಿಮಳೆಯೇ ಸುರಿಯುತ್ತಂತೆ. ಹಾಗಾಗಿಯೇ ಕಾರ್ತಿಕ ಮಾಸದಲ್ಲಿ, ನಾವು ನೆಲ್ಲಿ ಮರದ ಕೆಳಗೆ ನೆಲ್ಲಿಕಾಯಿಯಿಂದ ಕಾರ್ತಿಕ ದೀಪ ಬೆಳಗಿ, ದೇವರುಗಳಿಗೆ ನೆಲ್ಲಿದೀಪವನ್ನು ಮುಡಿಸುತ್ತೇವೆ.

ನಮ್ಮಲ್ಲಿ ಕಾರಹುಣ್ಣಿಮೆಗೆ "ಹೊನ್ನುಗ್ಗಿ"ಯನ್ನು ಮಾಡುತ್ತೇವೆ. ಕಾರಹುಣ್ಣಿಮೆಯ ಹಿಂದಿನ ಸಾಯಂಕಾಲ ನೆನಸಿದ 'ಬಿಳಿ ಅಥ್ವಾ ಕೆಂಪು ಜೋಳವನ್ನು ನೆನೆಸಿ, ಸ್ವಲ್ಪ ಒಣಗಿಸಿ ಒರಳಲ್ಲಿ ಕುಟ್ಟಿ, ನೆನಸಿ ಹುಣ್ಣಿಮೆ ದಿನದ ಹಿಂದಿನ ದಿನ ಸಾಯಂಕಾಲ "ಹೊನ್ನುಗ್ಗಿ" ಮಾಡಿ, ಬಸವ ಸ್ವರೂಪಿಯಾದ ಎತ್ತು, ಆಕಳು, ಕರುಗಳಿಗೆ ಪೂಜೆಮಾಡಿ ,"ಹಾಲುಬೆಲ್ಲ"ದ ಜೊತೆ ಅಂದರೆ ಬೆಲ್ಲದ ಒಂದೆಳೆ ಪಾಕ& – ಹಾಕಿ ಪ್ರಸಾದದ ರೀತಿ ಬುಟ್ಟಿ ತುಂಬಾ ತಿನ್ನಲು ಕೊಡುತ್ತಾರೆ. ಇದೇ ನಮ್ಮ "ಹೊನ್ನುಗ್ಗಿ" .ಆಕಳು, ಎತ್ತುಗಳ ನಂತರ ರಾತ್ರಿ ಊಟಕ್ಕೆ ನಮಗೂ ಇದರಲ್ಲಿ ತಿನ್ನುವುದಿರುತ್ತದೆ. ಅದರ ಸ್ವಾದ ರುಚಿಯನ್ನು ಉಂಡವರೇ ಬಲ್ಲರು.

ಚಿಕ್ಕವರಿಂದ ವಯಸ್ಸಾದವರಿಗೂ ಬಂಗಾರವಂತೂ ಬೇಕೆ ಬೇಕು. ದಿನನಿತ್ಯವಲ್ಲ ದಿದ್ದರೂ ಹಬ್ಬ–ಹರಿದಿನ, ಮನೆಯ ಸಮಾರಂಭ, ಮದುವೆ ಇತ್ಯಾದಿ ಶುಭ ಸಂದರ್ಭದಲ್ಲಿ ಬಂಗಾರದೊಡವೆಗಳು ಬೇಕೇ ಬೇಕು. ಇನ್ನೂ ಕೆಲವರಿಗೆ ತೋರಿಸಿಕೊಳ್ಳಲು ಪ್ರತಿಷ್ಠೆಯ ಪ್ರತೀಕ ಬಂಗಾರ.

"ಹೊನ್ನು, ಮಣ್ಣು, ಹೆಣ್ಣು" ಸುಲಭವಾಗಿ ದಕ್ಕುವುದಲ್ಲ, ಯುದ್ಧಗಳೇ ನಡೆದಿವೆ. ಹೊನ್ನ ಆಸೆಗಾಗಿ ಐತಿಹಾಸಿಕ ಸ್ಥಳಗಳು, ಮೂರ್ತಿಗಳು ಭಗ್ನಗೊಂಡಿರು ವುದನ್ನು ಕಾಣುತ್ತೇವೆ. ಯೋಗಾ ಯೋಗಾ, ಋಣ ಇದ್ದರೆ ಮಾತ್ರ ಹೊನ್ನು–ಮಣ್ಣು ದೊರಕುತ್ತದೆ, ಎಂಬ ಮಾತಿನಲ್ಲೂ ಹುರುಳಿದೆ. ಕೆಲವು ಸಲ ಹಣವಿದ್ದು ಖರೀದಿಸಲಾರದ, ಒಡವೆಗಳು ಮನೆಯಲ್ಲಿಯೇ ಇದ್ದು, ಬಂಗಾರ ವನ್ನು ಧರಿಸದ ಪರಿಸ್ಥಿತಿ ಇದ್ದೇ ಇರುತ್ತದೆ.



ಲೀಲಾವತಿ ಶಿವನಗೌಡ್ರು,
ಅಂಕಸಮುದ್ರ, ಹ.ಬೊ.ಹಳ್ಳಿ

Hampi Times E-paper
SCAN AND READ

ಹಳದಿ ಲೋಹದ ಮೋಹ, ಕೇವಲ ಅಲಂಕಾರಕ್ಕೆ ಮಾತ್ರವಲ್ಲ. ಅದೊಂದು ಮನೆತನಗಳ ಪ್ರತಿಷ್ಠೆಯ ವಿಷಯದ ಜೊತೆ, ಮುಂದಿನ ಪೀಳಿಗೆಗೂ ಭದ್ರತೆ ಒದಗಿಸುವ "ಭದ್ರತಾ ಠೇವಣಿ"ಯಾಗಿದೆ. ಜೀವನವೆಂದರೆ ಏಳು–ಬೀಳಿನ ಸರಮಾಲೆ.ಎಷ್ಟೇಶ್ರೀಮಂತರಾದರೂ ಜೀವನದಲ್ಲಿ ಒಂದ್ಸಲ ಕಷ್ಟಗಳು ಒದಗಿ ಬಂದೇ ಬರುತ್ತದೆ. ಆ ಕಷ್ಟಗಳ ಸಮಯದಲ್ಲಿ ನೆರವಿಗೆ ಬರುವುದೇ ಬಂಗಾರ .ಆ ಘಳಿಗೆಯ ಕಷ್ಟವನ್ನು ಕಳೆದು, ಜೀವನವನ್ನು ಹೊಳೆಪುಗೊಳಿಸುವ ಚಿನ್ನ ವಾಗುತ್ತದೆ.

ಆಭರಣಗಳಾದರೂ ಎಷ್ಟು ವಿಧ. ಹಳತು ಒಡವೆಗಳನ್ನು ಹೆಸರಿಸುವುದಾದರೆ,' ಬುಗುಡಿ', 'ವಂಕಿ', 'ಬೋರುಮಾಳ', 'ಬೇವಿನಕಾಯಿ ಸರ',' ಮೋಹನ ಹಾರ', 'ಹಳೆಯ ಮಾದರಿಯ ದೇವಸ್ಥಾನ ಮಾದರಿಯ ಒಡವೆಗಳು', ಕನಕಧಾರ ಮಾಲೆ, 'ಅವಲಕ್ಕಿಸರ', 'ಕಾಸಿನಸರ', ಕೈ ತೊಡೆವು, ಕಿವಿಗೆ ಚುಚ್ಚುವ 'ತಾಲಕಡ್ಡಿ', ಕೈಗೆ' ಬಿಲ್ವಾರ ಬಳೆ', 'ಪಾಟಲಿ ಬಳೆ',' ನೆಲ್ಲಿಕಾಯಿ ಸರ', ಬೆರಳುಗಳನ್ನು ಅಲಂಕರಿಸುತ್ತಿದ್ದ' ವಂಕಿ ಉಂಗುರ', ಸೊಂಟದ ಡಾಬು,ಜಡೆಯನ್ನು ಅಲಂಕರಿಸುತ್ತಿದ್ದ ನಾಗರಬಿಲ್ಲೆ" ಇನ್ನು ಮನಸ್ಸು ಮೊಗೆದಷ್ಟು ಹೊರಬರುವ' ಕಸವರದ ಕುಸೂರಿ ಕೆಲಸದ ಓಲೆಗಳು' ಅನೇಕ.

ಬಂಗಾರದಲ್ಲ 'ಕಲ್ಕಿ' ಇರುತ್ತಾನೆ, ಒಬ್ಬರ ಒಡವೆ ಇನ್ನೊಬ್ಬರು ಧರಿಸಲೇಬಾರದು ಎನ್ನುವ ನಿಯಮ ಇದ್ದರೂ, ಹಲವು ಮನೆಗಳಲ್ಲಿ ಒಬ್ಬರ ಒಡವೆ, ಇನ್ನೊಬ್ಬರ ಚೆಲುವನ್ನು ಇಮ್ಮಡಿಸಲು ಸಹಕಾರಿಯಾಗಿದೆ. ನೆರೆಹೊರೆಯವರ ಅನುಬಂಧಕ್ಕೆ ಸಹಕಾರಿಯಾಗಿದೆ ಎಂದೇ ಹೇಳಬಹುದು. ಏಕೆಂದರೆ ಒಂದು ಮನೆಯ ಶುಭಸಮಾರಂಭವಿದ್ದರೆ, ಹಳದಿ ಆಭರಣ ಜಾಸ್ತಿ ಇರದಿದ್ದರೆ ಏನಾಯ್ತು? ಸಮಾರಂಭದ ಮನೆಯ ಸದಸ್ಯರನ್ನು ಪಕ್ಕದ ಮನೆಯೊಡತಿಯ ಒಡವೆಗಳೇ ಅಲಂಕರಿಸಿ ಸುಂದರಗೊಳಿಸುತ್ತವೆ. ಅಲ್ಲಿಗೆ ಹಳದಿ ಲೋಹವು ಸಂಬಂವನ್ನು ಅನುಬಂಧಗೊಳಿಸುವ ಸಾಧನವೆಂದಾಯ್ತು.

"ಬಂಗಾರ ಕೃತಕ, ಶೃಂಗಾರ ಕ್ಷಣಿಕ. ಬಾಳಲ್ಲಿ ಬಡಿವಾರವೇಕೇ?" ಎಂಬ

ಪಂಚಾಕ್ಷರಿ ಗವಾಯಿಗಳ ಮಾತು ಸರ್ವಕಾಲಿಕ ಸತ್ಯ. 'ನೀನಿತ್ತ ಕಾಯ'ವಾದ 'ದೇಹವೇ ನೀನಿತ್ತ ಅಂಬಲಿ' ಎಂದು, ಕ್ಷಣಿಕತೆಯ ಸಂಕೇತವಾದ ಬಂಗಾರದ ಮೋಹದ ಬಗ್ಗೆ ಹೇಳಿದ್ದಾರೆ. ಅಂದರೆ "ಕಸವರ" ವು ನಾವೇ ಸಂಪಾದಿಸಿದ್ದದ್ದಾರೂ ಪೀಳಿಗೆಯಿಂದ ಪೀಳಿಗೆಗೆ ಮುಂದುವರೆಯುತ್ತದೆ. ನಾವು ಹೋಗುವಾಗಲೂ ಒಂದು ಗುಲಗುಂಜಿಯಷ್ಟು ಸಹ, ಬಂಗಾರ ಹೊತ್ತೊಯ್ಯುವುದಿಲ್ಲ ಎಂಬುದು ಅಷ್ಟೇ ಕಟುಸತ್ಯ.

ನಮ್ಮ ಹಳ್ಳಿಗಳ ಕಡೆಗಳಲ್ಲಿ ಅಮ್ಮಂದಿರು, ತಮ್ಮ ಹೊಲಗಳಿಗೆ ಆಳು ಮಕ್ಕಳ ಜೊತೆ ಹೊಲಗಳಿಗೆ ಹೋಗುವಾಗ, ಆಕಳು, ಎಮ್ಮೆಗಳನ್ನು ಮೇಯಲು ಕರೆದೊಯ್ದು, ಮಕ್ಕಳಂತೆ ಸಾಕಿ–ಸಲಹಿ, ಅದರ ಹಾಲನ್ನು ಮಾರಿ, ಬೆಣ್ಣೆ–ತುಪ್ಪ ಮಾರಿ ಚಿಕ್ಕ–ಪುಟ್ಟ ಒಡವೆಗಳನ್ನು, ತಮ್ಮ ಹೆಣ್ಣುಮಗುವಿಗೆ ಮಾಡಿಸಿಡುವ ರೂಡಿಯನ್ನು ಇಂದಿಗೂ ಕಾಣುತ್ತೇವೆ. ಅಲ್ಲಿಗೆ ಕುಟುಂಬದ ಯಜಮಾನನ ಭಾರ, ಒಂದು ಗುಲಗಂಜಿಯಷ್ಟು ಕಡಿಮೆಯಾಯಿತು ಎನ್ನಬಹುದು. ಹಾಗಾಗಿಯೇ "ಆಕಳ ಹೊಟ್ಟೇಲಿ ಅಚ್ಚೇರು ಬಂಗಾರ"

ಅಂದರೆ, ಅಚ್ಚೇರು 2 ಪಾವಿನಷ್ಟು ಬಂಗಾರ' ಎನ್ನುವ ಮಾತು ರೂಡಿಗೆ ಬಂದಿದೆಎಂದರೂತಪ್ಪಾಗಲಾರದು.ಆಕಳುಲಕ್ಷ್ಮೀಸ್ವರೂಪವೆಂದಿರಬಹುದು. ಹಾಲು, ಹಾಲಿನ ಉತ್ಪನ್ನ ಮಾರಾಟದಿಂದ ತೆಗೆದುಕೊಡ ಬಂಗಾರವಿರಬಹುದು. ಏನೇ ಇರಲಿ ಇಂದಿಗೂ ಎಷ್ಟೋ ಮನೆಗಳಲ್ಲಿ ತಮ್ಮ ಮನೆಯ ಲಕ್ಷ್ಮಿಯರಿಗೆ, ಹೀಗೆಯೇ ಚಿಕ್ಕ ಬಂಗಾರದೊಡವೆ ಲಭಿಸಿರುವುದನ್ನು ಗಮನಿಸಿರುತ್ತೇವೆ.

ಮದುವೆಗಳಲ್ಲಿ ಮಗಳು, ಅಳಿಯನಿಗೆ ಚಿನ್ನ ಹಾಕುವ ಪದ್ಧತಿ ಇನ್ನೂ ಇದೆ. ಮಾತುಕಥೆ ನಡೆಯುವಾಗ 'ಚಿನ್ನ ಹಾಕುವ' ಬಗ್ಗೆ ಮಾತಾಡದಿದ್ದರೂ ಸಹ, ಕನಿಷ್ಟ ಅವರ ಅನುಕೂಲಾನುಸಾರ ಚಿನ್ನದ ಒಡವೆ ಹಾಕಿಯೇ ಇರುತ್ತಾರೆ. ಅಂದರೆ ಹಳದಿ ಚಿನ್ನದ ಕೇವಲ ಅಲಂಕಾರ ಸಾಮಾಗ್ರಿ ಅಲ್ಲ. ಅದೊಂದು ಜೀವನಕ್ಕೆ ದೊಡ್ಡವರು ಕೊಡುವ 'ಪರ್ಮನೆಂಟ್ ಠೇವಣಿ / ಆಸ್ತಿ'ಎಂದರೂ ತಪ್ಪಾಗಲಾರದು.

"ಬಂಗಾರ ಬಂಗು ಬಿಡಿಸಿತು" ಎಂಬ ಮಾತಿದೆ. ಮನೆತನಗಳ ಆಸ್ತಿ ವಿಭಜನೆಯ ಸಂಧರ್ಭದಲ್ಲಿ ಎಲ್ಲಾ ಹಂಚಿಕೆಯಾಗುವಾಗ, ತಲಾತಲಾಂತರವಾಗಿ ಬಂದ 'ಚಿನ್ನ'ವನ್ನು ಮೊದಲು ಹಂಚಿಕೊಳ್ಳಬಾರದು ಎಂಬ ಮಾತಿದೆ. ಹಾಗೆ ಅದರ ಹಂಚಿಕೆಯಾದರೆ ಹಲವು ದಿನಗಳವರೆಗೆ, ಕಷ್ಟಗಳು ತಪ್ಪಿದ್ದಲ್ಲಾ ಎಂಬುದು ಅವರವರ ಬಲವಾದ ನಂಬಿಕೆಯಷ್ಟೆ.

ಬಂಗಾರ ಒಂದು ಗುಂಜಿಯಷ್ಟು ಸಿಕ್ಕರೂ, ಗೊತ್ತಿದ್ದೋ ಗೊತ್ತಿರದೆಯೋ ತೆಗೆದುಕೊಳ್ಳಬಾರದು. ಕಳೆದುಕೊಂಡವರ ಒದ್ದಾಟ, ಇದರಿಂದ ಸಂಕಷ್ಟ ಪಡಬಾರದೆಂಬ ಕಾಳಜಿ. ಪ್ರಾಚೀನ ಕಾಲದಿಂದಲೂ ಹೊನ್ನು, ಮಣ್ಣಿಗಾಗಿಯೇ ಯುದ್ಧಗಳು ನಡೆದು ಇತಿಹಾಸವೇ ಸೃಷ್ಟಿಯಾಗಿದೆ.

ಉದಾ:– ರಾಮಾಯಣ, ಮಹಾಭಾರತ, ಪಾಣಿಪತ್ ಕದನಗಳು, ಮಾತೃ ಭೂಮಿಯ ಸಲುವಾಗಿ ನಡೆದ ಸ್ವಾತಂತ್ರ್ಯ ಸಂಗ್ರಾಮ, ಪುರಾಣ ಪ್ರಸಿದ್ಧ ಸೋಮನಾಥ ದೇಗುಲವನ್ನು ಒಡೆದದ್ದು, ಕಾಶಿ, ಹಂಪಿಯ ಅನೇಕ ಮೂರ್ತಿಗಳನ್ನು ಭಗ್ನಗೊಳಿಸಿರುವುದು ಸಹ ಬಂಗಾರದ ಮೋಹದ ದುರಾಸೆಯಿಂದಲೇ. ಇವು ದುರುಳ ಮನುಜನ ಬಂಗಾರದ ಮೇಲಿನ ಮೋಹದ ದುರಾಸೆಯ ಸಂಕೇತವಾಗಿ, ಇಂದಿಗೂ ಸಹ ಅಂದಿನ ದುರಂತ ಕಥೆಯನ್ನು ಸಾರುತ್ತಾ ನಿಂತಿವೆ.

ಬಂಗಾರ ಬೇಕು ನಿಜ. ಆದರೆ ಅದು ಅತಿಯಾಸೆಗೆ, ಯಾರ ಮನಕ್ಕೆ ನೋವಾಗದಂತಿರಲಿ. ಕೆಲವರಿಗೆ ತೀರ ಬಂಗಾರ ಹಾಕಿಕೊಳ್ಳುವ ಆಸೆ ಇರುವುದಿಲ್ಲ . ಅವರನ್ನೂ"ಬಿಚ್ಚೋಲೆ ಗೌರಮ್ಮ"ನೆಂದು ತಮಾಷೆ ಮಾಡುತ್ತಾರೆ. ಇನ್ನೂ ಕೆಲವರಿಗೆ ಸಾಲ ಸೋಲ ಮಾಡಿಯಾದರೂ ಬಂಗಾರ ಒಡವೆ ಬೇಕೆಂಬ ವ್ಯಾಮೋಹ, ಬಡ್ಡಿ ಬಂಗಾರಮ್ಮನ ರೀತಿ. ಒಡವೆ ವ್ಯಾಮೋಹ ಅವರರವರ ವೈಯುಕ್ತಿಕ ವಿಷಯವಾದರೂ, ಒಂದೆಳೆ ಸರ ಬೇಕೇ ಬೇಕು ಎಂಬ ಮೋಹವು, ಎಲ್ಲರನ್ನು ತನ್ನತ್ತ ಸೆಳೆಯುತ್ತಾ, ಸುಲಭಕ್ಕೆ ಕೈಗೆ ಸಿಗದೇ ಗಗನದಲ್ಲಿ ನಿಲ್ಲಲ್ಲು ಸಫಲವಾಗಿದೆ.

ಪೌರಕಾರ್ಮಿಕರು ಮಕ್ಕಳಿಗೆ ಶಿಕ್ಷಣ ಕೊಡಿಸಿ

ಮೊದಲ ಪುಟದಿಂದ

ಎಂದು ಮಹಿಳಾ ನೌಕರರಿಗೆ ಕೇಳಿ ಅವರ ಅಹವಾಲು ಆಲಿಸಿದರು. ಪೌರ ಕಾರ್ಮಿಕರಿಗೆ ಇರುವ ಸೌಕರ್ಯಗಳು, ಅವರ ಹಕ್ಕುಗಳು, ಅವರ ಕರ್ತವ್ಯಗಳು ಸೇರಿದಂತೆ ಮಾಹಿತಿಯ ಫಲಕವನ್ನು ಎಲ್ಲಾ ಪುರಸಭೆ ನಗರಸಭೆ ಪಟ್ಟಣ ಪಂಚಾಯಿತಿಗಳಲ್ಲಿ ಅಳವಡಿಸಲು ಅಧ್ಯಕ್ಷರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗುರುತಿನ ಚೀಟಿ ನೀಡಿ: ಇನ್ಸೂರೆನ್ಸ್ ನಂಬರ್, ರಕ್ತದ ಗುಂಪು, ಇಎಸ್ಐ ನಂಬರ್ ಸೇರಿದಂತೆ ಮಹತ್ವದ ಮಾಹಿತಿ ಇರುವ ಗುರುತಿನ ಚೀಟಿಗಳನ್ನು ಮುದ್ರಿಸಿ ಪ್ರತಿಯೊಬ್ಬ ಪೌರ ಕಾರ್ಮಿಕರಿಗೆ ನೀಡುವಂತೆ ಅಧ್ಯಕ್ಷರು ಅಧಿಕಾರಿಗಳಿಗೆ ಮತ್ತು ಹೊರಗುತ್ತಿಗೆ ನೌಕರರನ್ನು ಒದಗಿಸುವ ಏಜೆನ್ಸಿಗಳಿಗೆ ನಿರ್ದೇಶನ ನೀಡಿದರು.

ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ: ಪೌರ ಕಾರ್ಮಿಕರೊಂದಿಗೆ ಮಾತನಾಡುವ ವೇಳೆಯಲ್ಲಿ 'ನನ್ನ ತಂದೆ ಮತ್ತು ತಾಯಿ ಇಬ್ಬರು ಸಫಾಯಿ ಕರ್ಮಚಾರಿಗಳು' ಎಂದು ತಿಳಿಸುತ್ತ ಅಧ್ಯಕ್ಷರಾದ ಎಂ.ವೆಂಕಟೇಶನ್ ಅವರು ಭಾವುಕರಾದರು. ಈ ಸಫಾಯಿ ಕರ್ಮಚಾರಿ ಕೆಲಸವು ಮುಂದೆ ನಮ್ಮ ಮಕ್ಕಳಿಗೂ ಬೇಕು ಎಂದು ನೀವು ಬಯಸುತ್ತೀರಾ ಎಂದು ಅವರು ಇದೆ ವೇಳೆ ಪೌರ ಕಾರ್ಮಿಕರಿಗೆ ಕೇಳಿದರು. 'ನಮ್ಮ ಮಕ್ಕಳಿಗೆ ಈ ಕೆಲಸ ಬೇಡವೇ ಬೇಡ, ನಾವು ನಮ್ಮ ಮಕ್ಕಳನ್ನು ಓದಿಸುತ್ತಿದ್ದೇವೆ'

ಎಂದು ಕೆಲವು ಪೌರ ಕಾರ್ಮಿಕರು ಪ್ರತಿಕ್ರಿಯಿಸಿದರು. 'ಈ ಕೆಲಸ ನನ್ನಿಂದ ಕೊನೆಯಾಗಲಿ.. ನಮ್ಮ ಮಕ್ಕಳನ್ನು ಓದಿಸುತ್ತೇವೆ. ಅವರಿಗೆ ಈ ಕೆಲಸ ಬೇಡ' ಎನ್ನುವ ನಿಮ್ಮ ಮನದ ವಿಷಯವನ್ನು, ವಿಚಾರವನ್ನು ನಿಮ್ಮ ಮಕ್ಕಳಿಗೆ ತಿಳಿಸಿರಿ. ನಿಮಗೆ ಊಟವಿಲ್ಲದಿದ್ದರೂ ಪರವಾಗಿಲ್ಲ.. ನಿಮ್ಮ ಮಕ್ಕಳಿಗೆ ಉತ್ತಮವಾದ ವಿದ್ಯಾಭ್ಯಾಸ ಕೊಡಿಸಿ.. ಎಂದು ಅಧ್ಯಕ್ಷರು ನೆರೆದಿದ್ದ ಎಲ್ಲ ಪೌರ ಕಾರ್ಮಿಕರಿಗೆ ಸಲಹೆ ಮಾಡಿದರು.

ನಿವೇಶನ ಕೊಡುತ್ತೇವೆ: ನಮಗಿನ್ನು ಮನೆಯಿಲ್ಲ. ನಮಗೆ ಮನೆ ಕೊಡಿ ಎಂದು ಕೆಲವು ಪೌರ ಕಾರ್ಮಿಕರು ಸಭೆಯಲ್ಲಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮನೋಹರ ಅವರು, ಪೌರ ಕಾರ್ಮಿಕರಿಗೆ ಮನೆ ಬೇಕು ಎನ್ನುವ ಬೇಡಿಕೆಯನ್ನು ಪರಿಗಣಿಸಿ ಆರು ತಿಂಗಳೊಳಗೆ ನಿವೇಶನ ನೀಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಕಾಯಿದೆಯಾಗಲಿ: ಪೌರ ಕಾರ್ಮಿಕರಿಗೆ ವೈಜ್ಞಾನಿಕ ರೀತಿಯಲ್ಲಿ ಹೆಲ್ತ್ ಕ್ಯಾಂಪ್ ಆಯೋಜನೆ ಮಾಡಬೇಕು. ಸಕಾಲಕ್ಕೆ ಚಿಕಿತ್ಸೆ ಸಿಗದೇ ಸಫಾಯಿ ಕರ್ಮಚಾರಿಗಳು ಸಾವಿಗೀಡಾಗಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಒಟ್ಟಾರೆ ಪೌರ ಕಾರ್ಮಿಕರು ಉತ್ತಮ ಬದುಕು ನಡೆಸುವ ನಿಟ್ಟಿನಲ್ಲಿ ಕ್ರಮವಾಗಲು ಕಟ್ಟುನಿಟ್ಟಾದ ಕಾಯಿದೆಯೊಂದನ್ನು ರೂಪಿಸಬೇಕು ಎಂದು ಮುಖಂಡರಾದ ರಾಮಚಂದ್ರ ಅವರು ಸಭೆಗೆ ಮನವಿ ಮಾಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ., ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ., ಸಹಾಯಕ ಆಯುಕ್ತರಾದ ಮೊಹಮ್ಮದ್ ಅಲಿ ಅಕ್ರಮ ಷಾಹ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲಿಂ ಪಾಷಾ, ಹೊಸಪೇಟೆ ನಗರಸಭೆ ಪೌರಾಯುಕ್ತರಾದ ಚಂದ್ರಪ್ಪ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದ್ದೀನ್, ನಗರಸಭೆಯ ಸಹಾಯಕ ಅಭಿಯಂತರರಾದ ಆರತಿ, ಹಿರಿಯ ಆರೋಗ್ಯ ನಿರೀಕ್ಷಕರಾದ ಲತಾ ಸೇರಿದಂತೆ ವಿವಿಧ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು ಮತ್ತು ಇನ್ನೀತರರು ಇದ್ದರು. ವಿಜಯನಗರ ಜಿಲ್ಲಾ ನಗರಾಭಿವೃದ್ಧಿ ಕೋಶದ ವೆಂಕಟೇಶ ಕೆ. ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

ರಕ್ತವು ಎಲ್ಲಾ ವ್ಯಕ್ತಿಗಳಿಗೆ ಜೀವಸೆಲೆ ಮಕ್ಕಳನ್ನ

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಹಂಪಿ ಟೈಮ್ಸ್
9448633038,
Email:hampitimes@gmail.com

ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

15-06-2024 – ಶನಿವಾರ

ತಿಥಿ	: ನವಮಿ
ಪಕ್ಷ	: ಶುಕ್ಲ
ನಕ್ಷತ್ರ	: ಉತ್ತರ ಪಾಲ್ಗುಣ
ಯೋಗ	: ವ್ಯತಾಪತಾ
ಕರಣ	: ಬಾಳವ
ಸೂರ್ಯೋದಯ	: 05:42:16
ಸೂರ್ಯಾಸ್ತ	: 19:12:52
ರಾಹು	: 09:05–10:46
ಯಮಘಂಡ	: 14:09–15:50
ಗುಳಿಕ	: 05:42–07:24

ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 14-06-2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1582.69 ಅಡಿ
ಒಳ ಹರಿವು	3737 ಕ್ಯುಸೆಕ್
ಹೊರ ಹರಿವು	10 ಕ್ಯುಸೆಕ್
ಇಂದಿನ ಸಾಮರ್ಥ್ಯ	5.910 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಇಂದಿನ ಮಟ್ಟ	1581.06 ಅಡಿ
ಒಳ ಹರಿವು	106 ಕ್ಯುಸೆಕ್
ಹೊರ ಹರಿವು	244 ಕ್ಯುಸೆಕ್
ಸಾಮರ್ಥ್ಯ	5.0007 ಟಿಎಂಸಿ

ರಕ್ತದಾನ ಆರೋಗ್ಯದಲ್ಲಿ ಸದಾ ಚೈತನ್ಯ ತರಲಿದೆ

ಬಿ.ಎಂ.ಎಂ.ಸಂಸ್ಥೆ ರಕ್ತದಾನ ಶಿಬಿರದಲ್ಲಿ ಸಂಸ್ಥೆಯ ಸಿಇಒ ವಿಮಲ್ ಸಿಂಗ್ ಅಭಿಮತ

■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ:** ದಾನಗಳಲ್ಲಿಯೇ ಅತಿ ಶ್ರೇಷ್ಠದಾನ ರಕ್ತದಾನವಾಗಿದೆ. ರಕ್ತದಾನ ಮತ್ತೊಬ್ಬರ ಜೀವ ಉಳಿವಿಗೆ ಕಾರಣವಾದರೆ, ರಕ್ತದಾನಿಗೆ ದೇಹದಲ್ಲಿ ಉತ್ತಮ ಅರೋಗ್ಯ, ಚೈತನ್ಯ ಹೆಚ್ಚಲಿದೆ ಎಂದು ಬಿಎಂಎಂ ಸಂಸ್ಥೆಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ವಿಮಲ್ ಸಿಂಗ್ ಅಭಿಪ್ರಾಯಪಟ್ಟರು.

ಬಿ.ಎಂ.ಎಂ.ಇಸ್ಮಾತ್ ಸಂಸ್ಥೆ, ಜೆ.ಎಸ್.ಡಬ್ಲ್ಯೂ ಫೌಂಡೇಶನ್, ಸರಕಾರಿ ಸಾರ್ವಜನಿಕ ಆಸ್ಪತ್ರೆ ಹೊಸಪೇಟೆ ಹಾಗೂ ವಿಮ್ಸ್ ರಕ್ತ ಭಂಡಾರ ಬಳ್ಳಾರಿ ಇವರ ಸಹಯೋಗದಲ್ಲಿ ಶುಕ್ರವಾರ ನಡೆದ ಉಚಿತ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು. ಅವಶ್ಯಕತೆ ಇರುವವರಿಗೆ ರಕ್ತದಾನ ಮಾಡುವುದರಿಂದ ಒಂದು ಅಮೂಲ್ಯ ಜೀವ ಉಳಿಸಿದ ಹೆಮ್ಮೆ ನಮ್ಮದಾಗುತ್ತದೆ. ಆರೋಗ್ಯವಂತ ವ್ಯಕ್ತಿ ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು. ರಕ್ತದಾನ ಶಿಬಿರದ ಈ ಅಭೂತಪೂರ್ವ ಕಾರ್ಯದಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಂಘ, ಸಂಸ್ಥೆಗಳು, ಸಾರ್ವಜನಿಕರು ಸಕ್ರೀಯವಾಗಿ ಪಾಲ್ಗೊಂಡು ಸ್ವಯಂ ಇಚ್ಛೆಯಿಂದ ರಕ್ತದಾನಕ್ಕೆ ಮುಂದಾಗಬೇಕು ಎಂದು ಹೇಳಿದರು.

ಮರಿಯಮ್ಮನಹಳ್ಳಿಯ ಖ್ಯಾತ ವೈದ್ಯ ಹಾಗೂ ಬಿ.ಎಂ.ಎಂ. ಸಂಸ್ಥೆಯ ಮುಖ್ಯ ವೈದ್ಯಾಧಿಕಾರಿ ಡಾ. ಪಿ. ವಿಜಯ ವೆಂಕಟೇಶ್ ಮಾತನಾಡಿ, ರಸ್ತೆ ಅಪಘಾತ, ಹರಿಗೆ ಸಂದರ್ಭ ಮತ್ತು ತೀರಾ ತುರ್ತು ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಇದ್ದು, ಈ ಸಂದರ್ಭದಲ್ಲಿ ರಕ್ತದಾನ ಮಾಡುವುದರಿಂದ ಇನ್ನೊಬ್ಬರ ಜೀವ ಉಳಿಸಿದ ಪುಣ್ಯ ಮತ್ತು ನಮ್ಮಲ್ಲಿ ಹೊಸ ರಕ್ತ ಉತ್ಪತ್ತಿಯಾಗವ ಜೊತೆಗೆ ನಮ್ಮಲ್ಲಿರುವ ಕೊಲೆಸ್ಟ್ರಾಲ್ ಪ್ರಮಾಣವೂ ತಗ್ಗಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಹೊಸಪೇಟೆ ಸಾರ್ವಜನಿಕ ಆಸ್ಪತ್ರೆಯ ಡಾ. ಸೋಮಶೇಖರ ಮಾತನಾಡಿ, ರಕ್ತ ಕೃತಕವಾಗಿ ತಯಾರಿಸುವ ವಸ್ತು ಅಲ್ಲ. ಇದು ಒಂದು ಮಾನವೀಯ ಕಾರ್ಯವಾಗಿದ್ದು, ಒಬ್ಬ ವ್ಯಕ್ತಿಯು ಹೆಚ್ಚಿನ ಮಟ್ಟದಲ್ಲಿ ರಕ್ತ ಕಳೆದುಕೊಂಡಾಗ ಅಥವಾ ಯಾವುದಾದರೂ ಮಾರಣಾಂತಿಕ ಕಾಯಿಲೆಗಳಿಗೆ ಒಳಗಾದಾಗ, ರಕ್ತ ದೊರೆಯದೇ ಇದ್ದಾಗ, ಸಾವು ಸಹ ಸಂಭವಿಸಬಹುದು. ಆಗ ರಕ್ತದಾನ ಮಾಡುವುದರಿಂದ ದಾನಿಯ ಆರೋಗ್ಯ ಸ್ಥಿತಿ ಸುಧಾರಿಸುವುದಲ್ಲದೇ, ವ್ಯಕ್ತಿಯ ಜೀವವೂ ಉಳಿಯುತ್ತದೆ ಎಂದರು.

ಬಿ.ಎಂ.ಎಂ.ಸಂಸ್ಥೆಯ ಕಾರ್ಯಾನಿರ್ವಾಹಕ ನಿರ್ದೇಶಕ ಮನೀಶ್ ಡಿ.ವರ್ಣೇಕರ್, ಆಡಳಿತ ಮತ್ತು ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಗಣೇಶ್ ಹೆಗಡೆ. ಬಿ.ಎಂ.ಎಂ. ವೃತ್ತೀಯ ಆರೋಗ್ಯ ಕೇಂದ್ರದ ಡಾ. ಅಂಜಿನಿ, ಡಾ.ಸುಧೀರ್, ಡಾ.ಜನಾರ್ಧನ, ಡಾ. ಅನುಷ, ಬಳ್ಳಾರಿ ರಕ್ತ ಭಂಡಾರದ ಸಂತೋಷ್ ಎಂ.ಜಿ. ಹನುಮೇಶ್ ಅಂಜಿನಪ್ಪ, ಮತ್ತು ಸಿಬ್ಬಂದಿ, ಹೊಸಪೇಟೆ ಸಾರ್ವಜನಿಕ ಆಸ್ಪತ್ರೆಯ ಜಗದೀಶ್ ಮತ್ತು ಸಿಬ್ಬಂದಿ ಸೇರಿದಂತೆ ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಗೂ ಆರೋಗ್ಯ ಸಿಬ್ಬಂದಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಯ ನಂತರ ಬಿಎಂಎಂ ಸಂಸ್ಥೆಯ ಉದ್ಯೋಗಿಗಳು ಮತ್ತು ಗುತ್ತಿಗೆ ಕಾರ್ಮಿಕರು ಸ್ವಯಂ ಪ್ರೇರಣೆಯಿಂದ ರಕ್ತದಾನ ಶಿಬಿರದಲ್ಲಿ ಭಾಗವಹಿಸಿ ರಕ್ತದಾನ ನೀಡಿದರು.

ವಿಜ್ಞಾನ

ಗಾಜು ಒಡೆದಾಗ ಏಕೆ ಸದ್ದು ಮಾಡುತ್ತದೆ?

■ ಆರ್.ಬಿ.ಗುರುಬಸವರಾಜ

ದೈನಂದಿನ ಜೀವನದಲ್ಲಿ ಪಾರದರ್ಶಕ ವಸ್ತುವಾದ ಗಾಜಿನ ಬಳಕೆಗಳು ಹಲವಾರು. ಗೃಹ ನಿರ್ಮಾಣ ಮತ್ತು ಅಲಂಕಾರ, ಸಾರಿಗೆ, ಎಲೆಕ್ಟ್ರಾನಿಕ್, ಆಹಾರ ಸಂರಕ್ಷಣೆ, ಸೌರಶಕ್ತಿ ಉತ್ಪಾದನೆ, ವೈದ್ಯಕೀಯ, ಹೀಗೆ ವಿವಿಧ ಕ್ಷೇತ್ರಗಳಲ್ಲಿ ಗಾಜನ್ನು ಬಳಸಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಗಾಜಿನ ಬಳಕೆ ದಿನೇ ದಿನೇ ಹೆಚ್ಚುತ್ತಿದೆ. ಇದು ಬಹು ನಾಜೂಕಿನ ವಸ್ತುವಾಗಿದ್ದು ಅತ್ಯಂತ ಜಾಗರೂಕತೆಯಿಂದ ಬಳಸಬೇಕು. ಇಲ್ಲವಾದರೆ ಕ್ಷಣಾರ್ದದಲ್ಲಿ ಒಡೆದು ಹಾಳುಗುತ್ತದೆ. ಗಾಜು ಒಡೆದಾಗ ಜೋರಾದ ಸದ್ದು ಬರುವುದು ಸಹಜ. ಈ ಸದ್ದು ಏಕೆ ಬರುತ್ತದೆ ಎಂದು ತಿಳಿಯುವ ಕಾತುರತೆ ಎಲ್ಲರಲ್ಲೂ ಇರುತ್ತದೆ.

ಗಾಜು ಒಡೆದಾಗ, ಗಾಜಿನಲ್ಲಿ ಸಂಗ್ರಹವಾಗಿರುವ ಶಕ್ತಿಯ ಏಕಕಾಲದಲ್ಲಿ ಬಿಡುಗಡೆಯಾಗು ವುದರಿಂದ ಅದು ಧ್ವನಿಯನ್ನು ಸೃಷ್ಟಿಸುತ್ತದೆ. ಗಾಜು ಒಂದು ದುರ್ಬಲವಾದ ವಸ್ತುವಾಗಿದ್ದು, ಅದರ ಆಣ್ವಿಕ ರಚನೆಯಿಂದಾಗಿ ಒತ್ತಡದ ಸ್ಥಿತಿಯಲ್ಲಿದೆ. ಒಂದು ಹೊಡೆತ ಅಥವಾ ಪ್ರಭಾವದಂತಹ ಬಾಹ್ಯ ಶಕ್ತಿಗಳನ್ನು ಗಾಜಿನ ಮೇಲೆ ಅನ್ವಯಿಸಿದಾಗ, ಅದು ಗಾಜು ಒಡೆಯಲು ಕಾರಣವಾಗುತ್ತದೆ ಮತ್ತು ಸಂಗ್ರಹವಾದ ಶಕ್ತಿಯು ಧ್ವನಿ ತರಂಗಗಳಾಗಿ ಬಿಡುಗಡೆಯಾಗುತ್ತದೆ. ಇದರಿಂದ ಗಾಜು ಜೋರಾದ ಸದ್ದು ಮಾಡುತ್ತದೆ.

ಗಾಜು ಒಡೆಯುವಾಗ ಉಂಟಾಗುವ ಶಬ್ದವು ಶಕ್ತಿಯ ಕ್ಷಿಪ್ರ ಬಿಡುಗಡೆಯ ಪರಿಣಾಮವಾಗಿದೆ. ಗಾಜು ಒಡೆಯುತ್ತಿದ್ದಂತೆ, ಗಾಳಿಯ ಮೂಲಕ ಚಲಿಸುವ ಮತ್ತು ಧ್ವನಿ ತರಂಗಗಳನ್ನು ಉತ್ಪಾದಿಸುವ ಆಘಾತ ತರಂಗಗಳನ್ನು ಸೃಷ್ಟಿಸುತ್ತದೆ. ಗಾಜಿನ ವಸ್ತುವಿನ ಗಾತ್ರ, ಅದನ್ನು ಒಡೆಯಲು ಅನ್ವಯಿಸಲಾದ ಬಲ ಮತ್ತು ಒಡೆಯುವಿಕೆ ಸಂಭವಿಸುವ ಪರಿಸರದಂತಹ ಅಂಶಗಳ ಆಧಾರದ ಮೇಲೆ ಉತ್ಪತ್ತಿಯಾಗುವ ಧ್ವನಿಯು ಪಿಚ್ ಮತ್ತು ತೀವ್ರತೆಯಲ್ಲಿ ಬದಲಾಗಬಹುದು.

ಇದರ ಜೊತೆಗೆ, ಒಡೆದ ಗಾಜಿನ ಶಬ್ದವು ಗಾಜಿನ ಆಕಾರ ಮತ್ತು ಸಂಯೋಜನೆಯಿಂದ ಪ್ರಭಾವಿತವಾಗಿರುತ್ತದೆ. ಉದಾಹರಣೆಗೆ ತೆಳುವಾದ, ಸೂಕ್ಷ್ಮವಾದ ವೈನ್ ಗ್ಲಾಸ್ ಒಡೆದಾಗ ಹೆಚ್ಚಿನ ಶಬ್ದವನ್ನು ಉಂಟುಮಾಡಬಹುದು. ಆದರೆ ದಪ್ಪವಾದ ಹೆಚ್ಚು ಬಾಳಿಕೆ ಬರುವ ಗಾಜಿನ ವಸ್ತುವು ಆಳವಾದ ಮತ್ತು ಕಡಿಮೆ ಪಿಚ್ ಧ್ವನಿಯನ್ನು ಉಂಟುಮಾಡಬಹುದು.

ಒಟ್ಟಾರೆಯಾಗಿ, ಗಾಜು ಒಡೆದಾಗ ಉಂಟಾಗುವ ಶಬ್ದವು ಗಾಜಿನ ಭೌತಿಕ ಗುಣಲಕ್ಷಣಗಳ ಪರಿಣಾಮವಾಗಿದೆ. ಜೊತೆಗೆ ಅದರ ಒಡೆಯುವಿಕೆಯ ಸಂದರ್ಭಗಳನ್ನು ಅವಲಂಬಿಸಿದೆ.

ಗೋಡಂಬಿ (ಗೇರು) ಬೆಳೆಯುವ ಆಸಕ್ತ ರೈತ-ರಿಂದ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಬಳ್ಳಾರಿ

ಪ್ರಸ್ತಕ ಸಾಲಿಗೆ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವತಿಯಿಂದ ವಿಜಯನಗರ ಜಿಲ್ಲೆ, ಬಳ್ಳಾರಿ ಜಿಲ್ಲೆ ಹಾಗೂ ಕೊಪ್ಪಳ ಜಿಲ್ಲೆಗಳಿಂದ ಗೋಡಂಬಿ ಬೆಳೆಯುವ ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ.ಮಂಜುನಾಥ ಭಾನುವಳ್ಳಿ ಅವರು ತಿಳಿಸಿದ್ದಾರೆ.

ಆಸಕ್ತ ರೈತರು ತಮ್ಮ ಜಮೀನಿನ ಮೂಲ ಪಹಣಿ ಪತ್ರ, ಆಧಾರ್ ಕಾರ್ಡನ ಜೆರಾಕ್ಸ್ ಪ್ರತಿ, ಪಾಸ್‌ಪೋರ್ಟ್ ಅಳತೆಯ ಫೋಟೋ-2, ಬ್ಯಾಂಕ್ ಪಾಸ್ ಪುಸ್ತಕದ ಜೇರಾಕ್ಸ್ ಹಾಗೂ ಗ್ರಾಮ ಪಂಚಾಯತಿಯಿಂದ ದೃಢೀಕರಿಸಲ್ಪಟ್ಟ ರಹವಾಸಿ (ನಿವಾಸಿ) ಪತ್ರದ ಜೊತೆಗೆ ಕೇಂದ್ರವನ್ನು ಸಂಪರ್ಕಿಸಿ ನಿಗಧಿತ ನಮೂನೆಯ ಅರ್ಜಿ ಪಡೆದು ಭರ್ತಿ ಮಾಡಿ ಸಲ್ಲಿಸಬೇಕು.

ಚೆನ್ನಾಗಿ ನೀರು ಬಸಿದು ಹೋಗುವ ಕೆಂಪು, ಮರಳು ಮಿಶ್ರಿತ ಗೂಡುಮಣ್ಣಿನ ಜಮೀನು ಹೊಂದಿರುವ ರೈತರು ಹಾಗೂ ಮೊದಲು ಬಂದಂತಹ ರೈತರಿಗೆ ಆದ್ಯತೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಜೂ.30 ಕೊನೆಯ ದಿನವಾಗಿದೆ. ಮಾಹಿತಿಗಾಗಿ ವೆಬ್‌ಸೈಟ್ https://dccd.gov.in ಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಸಹಾಯಕ ಪ್ರಾಧ್ಯಾಪಕಿ ಸುನೀತಾ ಎನ್.ಹೆಚ್ ಅವರ ಮೊ.7338479441 ಹಾಗೂ ಡಾ. ಮಂಜುನಾಥ ಭಾನುವಳ್ಳಿ ಅವರ ಮೊ. 9480696336, ದೂ.08399-240092ಗೆ ಸಂಪರ್ಕಿಸಬಹುದು.

ನಮ್ಮ ಭೂಮಿ, ನಮ್ಮ ಭವಿಷ್ಯ ಅರಿತರೆ ಸ್ವರ್ಗ

ಜೀವಶಾಸ್ತ್ರ ಉಪನ್ಯಾಸಕ ಮಲ್ಲಿಕಾರ್ಜುನ್ ಅಭಿಮತ। ವಿಶ್ವಪರಿಸರ ದಿನಾಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಅಮರಾವತಿಯಲ್ಲಿರುವ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜ್, ಪದವಿ ಪೂರ್ವ ಶಿಕ್ಷಣ ಇಲಾಖೆ ಸಹಯೋಗ ದೊಂದಿಗೆ ಶ್ರೀ ಓಂ ದುರ್ಗಾ ಪಾರ್ವತಿ ಸೇವಾ ಟ್ರಸ್ಟ್ ವಿಶ್ವ ಪರಿಸರ ದಿನ ಕುರಿತು ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಮೂಡಿಸಿತು.

ಕಾಲೇಜಿನ ಜೀವಶಾಸ್ತ್ರ ಉಪನ್ಯಾಸಕ ಮಲ್ಲಿಕಾರ್ಜುನ್ ಉಪನ್ಯಾಸ ನೀಡುತ್ತಾ, ಜೂನ್ 5ರಂದು ವಿಶ್ವಪರಿಸರ ದಿನಾಚರಣೆಯನ್ನು 1972 ರಿಂದಲೂ ಪ್ರತಿ ವರ್ಷ ಆಚರಿಸುತ್ತಾ ಬರಲಾಗುತ್ತಿದೆ. 2024 ರ ವಿಶ್ವ ಪರಿಸರ ದಿನದ ಥೀಮ್ "ಭೂಮಿ ಮರುಸ್ಥಾಪನೆ ಮರುಭೂಮಿ ಮತ್ತು ಬರ ಸ್ಥಿತಿಸ್ಥಾಪಕತ್ವವಾಗಿದೆ, "ನಮ್ಮ ಭೂಮಿ, ನಮ್ಮ ಭವಿಷ್ಯ" ಎಂಬ ಘೋಷಣೆಯೊಂದಿಗೆ ಜನರೇಷನ್ ರೀಸ್ಟೋರೇಷನ್ ಎಂಬ ಹ್ಯಾಶ್‌ಟ್ಯಾಗ್ ಹೊಂದಿದ್ದು ಜಗತ್ತಿನ ಎಲ್ಲಾ ಜನರಲ್ಲಿ ಪರಿಸರದ ಮುಖ್ಯ ಘಟಕಗಳಾದ ನೀರು ಗಾಳಿ ಮತ್ತು ಮಣ್ಣಿನ ಅಳಿವು ಉಳಿವಿನ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ

ವಿಶ್ವಸಂಸ್ಥೆಯು ಗ್ರಹದ ಸುಮಾರು 40% ಭೂಪ್ರದೇಶವು ಅವನತಿ ಹೊಂದಿದ್ದು, ವಿಶ್ವದ ಜನಸಂಖ್ಯೆಯ ಅರ್ಧದಷ್ಟು ಜನರ ಮೇಲೆ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದೆ. ಭೂಮಿಯ ಪುನಃಸ್ಥಾಪನೆಯ ಮೇಲೆ ಕೇಂದ್ರೀಕರಿಸುವ ಮೂಲಕ, ನಾವು ಎದುರಿಸು ತ್ತಿರುವ ತಾಪಮಾನ, ಬರ ಸೇರಿದಂತೆ ಇತರ ಬಿಕ್ಕಟ್ಟುಗಳನ್ನು ತಗ್ಗಿಸಬೇಕಿದೆ. ಅಳಿವಿನಂಚಿನ ಲ್ಲಿರುವ ಜೀವ ಜಾತಿಗಳನ್ನು ರಕ್ಷಿಸಬೇಕು. ಭವಿಷ್ಯದ ಪೀಳಿಗೆಗೆ ಆರೋಗ್ಯಕರ ವಾತವರಣ ನಿರ್ಮಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ಟ್ರಸ್ಟ್ ವತಿಯಿಂದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ದ್ವಿತೀಯ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿ ನಿಯರಿಗೆ ಬಹುಮಾನವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಮಂಜುನಾಥ್ ಮಾರುತಿ ವಿನಯ್ ಕುಮಾರ್ ಉಪಸ್ಥಿತರಿದ್ದರು

ಜೂ.15 ರಂದು ಗ್ರಾಮೀಣ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ ಎಮ್ಮಿಗನೂರಿನ 33/11ಕೆ.ವಿ ಉಪ-ಕೇಂದ್ರದಲ್ಲಿರುವ 11ಕೆ.ವಿ ಮಾರ್ಗಗಳ ಭಾರವನ್ನು ಹೊಸದಾಗಿ ನಿರ್ಮಿಸಿರುವ 110/11ಕೆ.ವಿ ಉಪ-ಕೇಂದ್ರಕ್ಕೆ ವರ್ಗಾಯಿಸುವ ಕಾರ್ಯವನ್ನು ತುರ್ತಾಗಿ ಕೈಗೊಳ್ಳುತ್ತಿರುವುದರಿಂದ ಜೂನ್ 15 ರಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯವಾಗಲಿದೆ ಎಂದು ಗ್ರಾಮೀಣ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಮೋಹನಬಾಬು ಅವರು ತಿಳಿಸಿದ್ದಾರೆ.

ಜೀವ ಉಳಿಸಿದ ರಕ್ತದಾನಿಗಳಿಗೆ ಸನ್ಮಾನ

ಹೊಸಪೇಟೆಯಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ನಿಮಿತ್ತ ಶುಕ್ರವಾರ ಜೀವ_ಉಳಿಸಿದ_ಮಹಾದಾನಿ ಬಿರುದುನೊಂದಿಗೆ ರಕ್ತದಾನಿಗಳಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ವಿಜಯನಗರ ಜಿಲ್ಲೆಯ ರೆಡ್ ಕ್ರಾಸ್ ಸಂಸ್ಥೆ, ಹೊಸಪೇಟೆಯ KKSRTC ಹಾಗೂ ವಿಜಯನಗರ ಜಿಲ್ಲೆಯ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಇದ್ದರು.

ಬಳ್ಳಾರಿ ಮಹಾನಗರ ಪಾಲಿಕೆ; ಜೂ.21 ರಂದು ಮೇಯರ್ ಸ್ಥಾನಕ್ಕೆ ಚುನಾವಣೆ

ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರ ಸ್ಥಾನಕ್ಕೆ ಜೂನ್ 21 ರಂದು ಮಧ್ಯಾಹ್ನ 12.30 ಗಂಟೆಗೆ ಪಾಲಿಕೆಯ ಶ್ರೀ ಕೃಷ್ಣದೇವರಾಯ ಸಭಾಂಗಣದಲ್ಲಿ ಕಲಬುರಗಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಚುನಾವಣೆ ನಡೆಸಲು ನಿಗದಿಪಡಿಸಲಾಗಿದೆ ಎಂದು ಬಳ್ಳಾರಿ ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್ ಸಾಬ್ ಅವರು ತಿಳಿಸಿದ್ದಾರೆ.

ಕೊಪ್ಪಳ ವಿವಿಯಲ್ಲಿ ದೇವದಾಸಿ ಮಕ್ಕಳಿಗೆ ಹಾಗೂ ಅಂಧ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಕ್ಕೆ ತೀರ್ಮಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಜೂನ್ 12 ರಂದು ಸಿಂಡಿಕೇಟ್ ಸಭೆ ನಡೆಯಿತು. ಈ ಸಭೆಯಲ್ಲಿ 2024-25ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿಯ ಪ್ರವೇಶಾತಿಯಲ್ಲಿ ದೇವದಾಸಿ ಮಕ್ಕಳಿಗೆ ಹಾಗೂ ಅಂಧ ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರವೇಶ ನೀಡಲು ಜೂನ್ 12 ರಂದು ಕೊಪ್ಪಳ ವಿಶ್ವವಿದ್ಯಾಯದಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ಸರ್ವಾನು ಮತದಿಂದ ತೀರ್ಮಾನಿಸಲಾಯಿತು.

ಮುಂದಿನ ದಿನಗಳಲ್ಲಿ ವಿವಿಯ ಸ್ನಾತಕೋತ್ತರ ಪದವಿಯ ಪ್ರವೇಶಾತಿ ಸಂದರ್ಭ ದೇವದಾಸಿ ಮಕ್ಕಳಿಗೆ ಹಾಗೂ ಅಂಧ ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರವೇಶ ನೀಡಲಾಗುವುದು ಎಂದು ವಿವಿ ಕುಲಸಚಿವರಾದ ಪ್ರೊ.ಕೆ.ವಿ.ಪ್ರಸಾದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಬೇಕಾಗಿದ್ದಾರೆ
Marketing Executive
> Any Graduate Can apply
> Good communication & Convincing skills
> Ability to work independently
> Freeshers are Invited
GOAL
STRATEGY
PLAN
Attractive remuneration and Excellent career development opportunities wait to the right candidate
Job Location:
HOSAPETE - VIJAYANAGARA Dist.
94825 99089
94486 33038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
ಕನಿಷ್ಟ ವೆಚ್ಚ ಗರಿಷ್ಠ ಪ್ರಚಾರ
Minimum Cost Maximum Promotion
Advertising is a marketing activity that can help you to reach out to potential customers and encourage them to buy your products or services.
increase customer reach
build customer awareness of your business and brand
promote the benefits of your products or services
communicate information about your business increase sales and demand
gain an advantage over your competitors.
PUBLISH YOUR ADVERTISEMENT IN HAMPI TIMES DAILY NEWSPAPER
Minimum Cost Maximum Promotion
ವಿಜಯನಗರ ಜಿಲ್ಲೆಯ ಹೆಮ್ಮೆ, ಸ್ಥಳೀಯ ನಂ.1 ಕನ್ನಡ ದಿನಪತ್ರಿಕೆ ಹಂಪಿ ಟೈಮ್ಸ್ ಇ-ಪೇಪರ್ ವಿಶ್ವದ ವಿವಿಧೆಡೆ ಇರುವ
70000+ ಕನ್ನಡ ಓದುಗರ ಕೈಯಲ್ಲಿ...
SCAN & READ HAMPI TIMES E-PAPER
Discount Offers
Good Creative Desgin
Economical Ads Rates
Combination Offers Available